# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಜನವರಿ 03, 2025

ಸಂಪುಟ : 51 ಸಂಚಿಕೆ : 231 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಜಗಳೂರು: ಕನ್ನಡ ರಥಕ್ಕೆ ಶಾಸಕರಿಂದ ಚಾಲನೆ



ಜಗಳೂರು, ಜ.2- ಇದೇ 11,12,13 ರಂದು ನಡೆಯಲಿರುವ 14 ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಹಾಗೂ ಜಲೋತ್ಸವದ ಪೂರ್ವಭಾವಿ ಯಾಗಿ ತಾಲ್ಲೂಕಿನ 22 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಚರಿಸಲಿರುವ 'ಕನ್ನಡ ರಥ'ಕ್ಕೆ ಶಾಸಕ ಬಿ. ದೇವೇಂದ್ರಪ್ಪ ಅವರ ನೇತೃತ್ವದಲ್ಲಿ ಇಂದು ಅದ್ಧೂರಿಯಾಗಿ ಚಾಲನೆ ನೀಡಲಾಯಿತು.

ಪಟ್ಟಣದ ತಾಲ್ಲೂಕು ಕಛೇರಿ ಆವರಣದಲ್ಲಿ ನೂರಾರು ವಿದ್ಯಾರ್ಥಿಗಳ, ಅಧಿಕಾರಿಗಳ ಸಮ್ಮುಖದಲ್ಲಿ ಮಾತನಾಡಿದ ಶಾಸಕ ಬಿ. ದೇವೇಂದ್ರಪ್ಪ, 14 ನೇ ಜಿಲ್ಲಾ ಸಾಹಿತ್ಯ ಸಮ್ಮೇಳನ ಹಾಗೂ ಜಲೋತ್ಸವ ಕಾರ್ಯಕ್ರಮಗಳ ಯಶಸ್ವಿಗೆ ಪಕ್ಷಾತೀತ, ಜಾತ್ಯತೀತವಾಗಿ ನುಡಿ ಹಬ್ಬ ಸಂಭ್ರಮಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಕನ್ನಡಾಂಬೆ ಭುವನೇಶ್ವರಿ ಕೃಪೆಗೆ ಪಾತ್ರರಾಗಬೇಕು ಎಂದು ಕರೆ ನೀಡಿದರು.

ರಥಕ್ಕೆ ಯಾವುದೇ ಚ್ಯುತಿ ಬರದಂತೆ ಕನ್ನಡಾಂಬೆಗೆ ಗೌರವಿಸಬೇಕು. ಸಂಭ್ರಮದಿಂದ ಸ್ವಾಗತಿಸಬೇಕು. ಗ್ರಾಪಂ ಅಧಿಕಾರಿಗಳು, ಜವಾಬ್ದಾರಿ ನಿರ್ವಹಿಸಬೇಕು ಎಂದು ಸೂಚಿಸಿದರು.

ಕೆರೆಗಳು ಕೋಡಿ ಬಿದ್ದ ಹಿನ್ನೆಲೆಯಲ್ಲಿ ಜಲ ಸಂಭ್ರಮಕ್ಕಾಗಿ ಜ.13ರಂದು 'ಜಲೋತ್ಸವ' ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಂಜೆ ರಸಮಂಜರಿ ಕಾರ್ಯಕ್ರಮಕ್ಕೆ ಸರಿಗಮಪ ಸೀಜನ್ ನ 40 ಜನರ ತಂಡ ಹಾಗೂ ಖ್ಯಾತ ಗಾಯಕರಾದ ಅರ್ಜುನ್ ಜನ್ಯ, ಅನುರಾಧ ಭಟ್ ಅವರು ಭಾಗವಹಿಸಲಿದ್ದಾರೆ. ಅಧಿಕ ಸಂಖ್ಯೆಯಲ್ಲಿ ಪ್ರೇಕ್ಷಕರು ಭಾಗವಹಿಸಬೇಕು ಎಂದು ಶಾಸಕರು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಲೋಕೇಶ್ ಮಾತನಾಡಿ, 14 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಭಾಗವಾಗಿ ಬುಡಕಟ್ಟು ಸಂಸ್ಕೃತಿ ನೆಲೆಸಿರುವ ತಾಲ್ಲೂಕಿನಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರಾದ ಎ.ಬಿ. ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ವೈಚಾರಿಕತೆ ಸಾರುವ ಗೋಷ್ಠಿಗಳು ನಡೆಯಲಿವೆ. ಎರಡು ದಿನಗಳ ಕಾಲ ಜರುಗಲಿರುವ ಸಾಹಿತ್ಯ ಸಂಭ್ರಮದ ಸೊಬಗು, ಸಾಂಸ್ಕೃತಿಕ ಕಾರ್ಯಕ್ರಮಗಳು, ಜಗಳೂರು ಇತಿಹಾಸ ಸಾರುವ (2ನೇ ಪುಟಕ್ಕೆ)

# ಬಸ್ ಚಾರ್ಜ್ ದುಬಾರಿ

## ಜ.5ರಿಂದ ಕೆಎಸ್ಸಾರ್ಟಿಸಿ ಬಸ್ ಪ್ರಯಾಣ ದರ ಶೇ.15ರಷ್ಟು ಏರಿಕೆ



ಬೆಂಗಳೂರು, ಜ.2- ರಾಜ್ಯ ರಸ್ತೆ ಸಾರಿಗೆ ನಿಗಮಗಳು ಶೇ.15ರಷ್ಟು ಪ್ರಯಾಣ ದರ ಹೆಚ್ಚಿಸಲು ಸಚಿವ ಸಂಪುಟ ಇಂದಿಲ್ಲಿ ಅನುಮತಿ ನೀಡಿದ್ದು, ಜನವರಿ 5 ರಿಂದಲೇ ಜಾರಿಗೆ ಬರಲಿದೆ.

ಪರಿಷ್ಕೃತ ಪ್ರಯಾಣ ದರವು ಎಲ್ಲಾ 4 ನಿಗಮಗಳ ಎಲ್ಲಾ ಬಸ್ ಗಳಿಗೆ ಅನ್ವಯವಾಗಲಿದೆ.

ಮುಖ್ಯಕಾರ್ಯದರ್ಶಿ ನೇತೃತ್ವದ ಉನ್ನತಮಟ್ಟದ ಸಮಿತಿ ಬಸ್ ಪ್ರಯಾಣ ದರ ಹೆಚ್ಚಳ ಸೇರಿದಂತೆ ಸಾರಿಗೆ ಸಂಸ್ಥೆ ಅಭಿವೃದ್ಧಿ ಮತ್ತು ಪ್ರಯಾಣಿಕರಿಗೆ ಮೂಲಸೌಕರ್ಯ ಸಂಬಂಧ ಮಾಡಿರುವ ಎಲ್ಲಾ ಶಿಫಾರಸ್ಸುಗಳಿಗೂ ಸಂಪುಟ ಸಮ್ಮತಿಸಿದೆ.

ಡೀಸೆಲ್ ಸೇರಿದಂತೆ ವಾಹನ ಬಿಡಿ ಭಾಗಗಳು, ಮತ್ತಿತರ ಸಾಮಗ್ರಿಗಳ ಬೆಲೆ, ಕಾರ್ಮಿಕರ ಭತ್ಯೆ ಹೆಚ್ಚಳ, ಹೊಸ ಬಸ್‌ಗಳ ಖರೀದಿಯಿಂದ ನಿಗಮಗಳ ಮೇಲೆ ಭಾರೀ ಹೊರೆ ಬಿದ್ದಿದೆ.

ವಾರ್ಷಿಕ 3,650 ಕೋಟಿ ರೂ.ನಷ್ಟು ನಾಲ್ಕು ನಿಗಮಗಳಿಂದ ನಷ್ಟ ಉಂಟಾಗುತ್ತಿದ್ದು, ಇದರಲ್ಲಿ ಕನಿಷ್ಠ ಶೇಕಡ 50ರಷ್ಟನ್ನು ಪ್ರಯಾಣ ದರ ಹೆಚ್ಚಳದಿಂದ ಭರಿಸಲು ಅವಕಾಶ ನೀಡಿದೆ. ನಗರ ಮತ್ತು ಗ್ರಾಮೀಣ ಪ್ರಯಾಣ ದರ ಯಾವ ಪ್ರಮಾಣದಲ್ಲಿ ಇರಬೇಕು ಎಂಬ ನಿರ್ಧಾರಗಳನ್ನು ನಿಗಮವೇ ಕೈಗೊಳ್ಳಲಿದೆ.

ಮುಂದಿನ ದಿನಗಳಲ್ಲಿ ತನ್ನ ಸಂಪನ್ಮೂಲ ವೃದ್ಧಿಗೆ ಸಮಿತಿ ಶಿಫಾರಸ್ಸುಗಳನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸುವ ಹಾಗೂ ಎಲೆಕ್ಟ್ರಿಕಲ್ ಬಸ್‌ಗಳ ಖರೀದಿಗೆ ಒತ್ತು ನೀಡಲು ನಿರ್ಧರಿಸಿದೆ.

ಶಕ್ತಿ ಯೋಜನೆ ಜಾರಿ ನಂತರ ಪ್ರತಿನಿತ್ಯ ಪ್ರಯಾಣಿಕರ ಸಂಖ್ಯೆ 80 ಲಕ್ಷದಿಂದ 1.05 ಕೋಟಿಗೆ ಏರಿಕೆಯಾಗಿದೆ.

ಅದರಲ್ಲಿ 26 ಲಕ್ಷ ಮಹಿಳೆ ಪ್ರಯಾಣಿಕರು ಸೇರಿದ್ದಾರೆ, ಇದರಿಂದ ಬಸ್‌ಗಳಲ್ಲಿ ಪ್ರಯಾಣಿಸುವರ ಸಂಖ್ಯೆ ಹೆಚ್ಚಾಗಿದ್ದು ಪ್ರಯಾಣಿಕರ ದಟ್ಟಣೆಯಿಂದಾಗಿ ಬಸ್‌ಗಳ ಕೊರತೆ ಎದುರಾಗಿದೆ. ಮುಂದಿನ ದಿನಗಳಲ್ಲಿ ಈ ಕೊರತೆ ನೀಗಿಸಲು ಹೆಚ್ಚುವರಿ ಬಸ್‌ಗಳ ಖರೀದಿಗೂ ಸಮಿತಿ ಸೂಚಿಸಿದೆ.

## ರಾಜ್ಯದಲ್ಲಿ ಹೊಸ ಗೋಶಾಲೆ ಆರಂಭಿಸದಿರಲು ನಿರ್ಧಾರ

ಬೆಂಗಳೂರು, ಜ.2- ರಾಜ್ಯದಲ್ಲಿ ಮತ್ತೆ ಹೊಸದಾಗಿ ಗೋಶಾಲೆಗಳನ್ನು ಪ್ರಾರಂಭಿಸದಿರಲು ಸಚಿವ ಸಂಪುಟ ನಿರ್ಧರಿಸಿದೆ.

ಹಾಲಿ 14 ಜಿಲ್ಲೆಗಳಲ್ಲಿನ ಗೋಶಾಲೆಗಳ ಬಲವರ್ಧನೆ ಮತ್ತು ಅಭಿವೃದ್ಧಿಗೆ 10.50 ಕೋಟಿ ರೂ.ಗಳನ್ನು ವೆಚ್ಚ ಮಾಡಲು ತೀರ್ಮಾನಿಸಿದೆ.

**ಬಿಜೆಪಿ ಸರ್ಕಾರ ತೆಗೆದುಕೊಂಡಿದ್ದ ಕಾರ್ಯಕ್ರಮ ಕೈಬಿಟ್ಟ ಸರ್ಕಾರ**

ಕಳೆದ 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿರುವ ಹೊಸ ಗೋಶಾಲೆ ಪ್ರಾರಂಭ, ನಿರ್ಮಾಣ ಎಂಬುದನ್ನು ಕೈಬಿಡಲು ತೀರ್ಮಾನಿಸಿದ್ದು, ಬಿಜೆಪಿ ಸರ್ಕಾರ ತೆಗೆದುಕೊಂಡಿದ್ದ ಕಾರ್ಯಕ್ರಮವನ್ನು ದೂರ ಮಾಡಿದೆ.

ಕೈಗಾರಿಕೆಗಳಿಗೆ ಉತ್ತೇಜನ ಮತ್ತು ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ 5,000 ಕೋಟಿ ರೂ.ವರೆಗೂ ಸಾಲ ಪಡೆಯಲು ಸಂಪುಟ ಸಮ್ಮತಿಸಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ ಪ್ರತ್ಯೇಕವಾಗಿ ಧಾರವಾಡ ಮಹಾನಗರ ಪಾಲಿಕೆ ರಚಿಸಲು ಸಂಪುಟ ನಿರ್ಧರಿಸಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಚಿಕ್ಕಬಳ್ಳಾಪುರ ಘಟಕದ ಕಾಲೇಜು ಕಟ್ಟಡ ನಿರ್ಮಾಣವನ್ನು 149.75 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ನಬಾರ್ಡ್ ನೆರವಿನಲ್ಲಿ (2ನೇ ಪುಟಕ್ಕೆ)

## ಹೆಚ್ಚುತ್ತಿರುವ ಬಡ್ಡಿ ದರ, ರಫ್ತು ಹಣಕಾಸಿನಲ್ಲಿ ಇಳಿಕೆ

ನವದೆಹಲಿ, ಜ. 2- ಹೆಚ್ಚಿನ ಬಡ್ಡಿ ದರದಿಂದಾಗಿ ಹಣಕಾಸು ಹರಿವು ಕುಂಠಿತವಾಗಿರುವುದು ಹಾಗೂ ರಫ್ತು ಹಣಕಾಸಿನಲ್ಲಿ ಇಳಿಕೆಯಾಗಿರುವುದು ಭಾರತದ ರಫ್ತುಗಾರರಿಗೆ ಸಮಸ್ಯೆ ತಂದಿದೆ. ಇದರಿಂದಾಗಿ ರಫ್ತುಗಾರರ ಸ್ಪರ್ಧಾತ್ಮಕತೆ ಮೇಲೆ ಪರಿಣಾಮವಾಗುತ್ತಿದೆ ಎಂದು ಸಿಐಐನ ಎಗ್ಸಿಮ್ ರಾಷ್ಟ್ರೀಯ ಅಧ್ಯಕ್ಷ ಸಂಜಯ್ ಬುಧಿಯಾ ಹೇಳಿದ್ದಾರೆ. ಈ ಸಮಸ್ಯೆಗೆ ಪರಿಹಾರ ಒದಗಿಸಲು ಸರ್ಕಾರ ಹಾಗೂ ಬ್ಯಾಂಕುಗಳು ಜೊತೆಯಾಗಿ ಕಾರ್ಯನಿರ್ವಹಿಸಬೇಕಿದೆ ಎಂದವರು ಹೇಳಿದ್ದಾರೆ. ಈ ಸಮಸ್ಯೆ ಬಗೆಹರಿಸಲು ಕೇಂದ್ರ (2ನೇ ಪುಟಕ್ಕೆ)

## ಉತ್ಪಾದನಾ ವಲಯದ ಬೆಳವಣಿಗೆ 12 ತಿಂಗಳಲ್ಲೇ ಅತಿ ಕಡಿಮೆ

ನವದೆಹಲಿ, ಜ. 2- ದೇಶದ ಉತ್ಪಾದನಾ ವಲಯದ ಬೆಳವಣಿಗೆ ಡಿಸೆಂಬರ್ ತಿಂಗಳಲ್ಲಿ ಕಳೆದ 12 ತಿಂಗಳಲ್ಲೇ ಅತಿ ಕಡಿಮೆಯಾಗಿದೆ. ಹೊಸ ಬೇಡಿಕೆಗಳು ಹಾಗೂ ಉತ್ಪಾದನಾ ವಿಸ್ತರಣೆ ಕಡಿಮೆಯಾಗಿದೆ ಎಂದು ಮಾಸಿಕ ವರದಿಯಲ್ಲಿ ತಿಳಿಸಲಾಗಿದೆ.

ಹೆಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ ಸೂಚ್ಯಂಕದ ಪ್ರಕಾರ ಡಿಸೆಂಬರ್ (2ನೇ ಪುಟಕ್ಕೆ)

## ಎಸ್ಸೆಸ್ ಆರೋಗ್ಯ ವಿಚಾರಿಸಿದ ತರಳಬಾಳು ಜಗದ್ಗುರುಗಳು



ದಾವಣಗೆರೆ, ಜ. 2- ಕಳೆದ ಕೆಲವು ದಿನಗಳಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರನ್ನು ಗುರುವಾರ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಆಶೀರ್ವದಿಸಿದರು.

**ಶತೋತ್ತರ ಆಯುಷಿಯಾಗುವಂತೆ ಆಶೀರ್ವದಿಸಿದ ಸ್ವಾಮೀಜಿ**

**ಸದಾ ಶಿಷ್ಯರ ಹಿತ ಬಯಸುವ ತಾವೇ ನಮ್ಮ ಗುರುಗಳು ಎಂದು ಭಾವುಕರಾದ ಶಾಮನೂರು ಶಿವಶಂಕರಪ್ಪ**

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ರವರು ಬೆಂಗಳೂರಿನ ಆರ್.ಟಿ. ನಗರದಲ್ಲಿರುವ ತರಳಬಾಳು ಕೇಂದ್ರಕ್ಕೆ ಆಗಮಿಸಿ, ತಮ್ಮ ತಂದೆಯ ಆರೋಗ್ಯದ ಬಗ್ಗೆ ಶ್ರೀಗಳಿಗೆ ಮಾಹಿತಿ ನೀಡಿದರು. ತಂದೆ ಶಾಮನೂರು ಶಿವಶಂಕರಪ್ಪನವರು ತಮ್ಮ ದರ್ಶನಕ್ಕೆ ಹಲವಾರು ಬಾರಿ ಅಪೇಕ್ಷಿಸುತ್ತಿರುವುದನ್ನು (2ನೇ ಪುಟಕ್ಕೆ)

## ಫೇಸ್‌ಬುಕ್ ಸ್ನೇಹಿತೆಯನ್ನು ಮದುವೆಯಾಗಲು ಪಾಕ್‌ಗೆ ತೆರಳಿ ಜೈಲು ಪಾಲು

ಲಾಹೋರ್/ಅಲೀಘಡ, ಜ.2- ಫೇಸ್‌ಬುಕ್‌ನಲ್ಲಿ ಗೆಳೆತನ ಬೆಳೆಸಿ ಮದುವೆಯಾಗಲೆಂದು ಪಾಕಿಸ್ತಾನಕ್ಕೆ ಅಕ್ರಮವಾಗಿ ತೆರಳಿದ ವ್ಯಕ್ತಿಯೋರ್ವ ಜೈಲು ಪಾಲಾಗಿದ್ದಾನೆ. ಅತ್ತ, ಮಹಿಳೆ ಸಹ ಆತನನ್ನು ಮದುವೆಯಾಗಲು ನಿರಾಕರಿಸಿದ್ದಾಳೆ.

ಉತ್ತರ ಪ್ರದೇಶದ ಅಲೀಘಡದ ಬಾದಲ್ ಬಾಬು ಎಂಬಾತನನ್ನು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮಂಡಿ ಬಹುದ್ದೀನ್ ಜಿಲ್ಲೆಯಲ್ಲಿ ಡಿಸೆಂಬರ್ 28ರಂದು ಬಂಧಿಸಲಾಗಿದೆ.

20ರ ಹರೆಯದ ಬಾಬು ಫೇಸ್‌ಬುಕ್ ಮೂಲಕ ಪರಿಚಯವಾದ ಗೆಳತಿಯನ್ನು ಮದುವೆಯಾಗಲು ಗಡಿ ದಾಟಿದ್ದ. ಪೊಲೀಸರ ಎದುರು ಹೇಳಿಕೆ ನೀಡಿರುವ 21 ವರ್ಷದ ಗೆಳತಿ ಸನಾ ರಾಣಿ, ತಾನು (4ನೇ ಪುಟಕ್ಕೆ)

## ಮಹಿಳೆಯರ ಮಂಗಳ ಸೂತ್ರ 'ಕಳುವಿಗೆ' ಸರ್ಕಾರ ಕಾರಣ

ನವದೆಹಲಿ, ಜ. 2- ಕೇಂದ್ರ ಸರ್ಕಾರದ ಕ್ಷುದ್ರ ಬಂಡವಾಳಶಾಹಿತನ, ದೋಷಪೂರಿತ ನೀತಿಗಳು ಹಾಗೂ ತಪ್ಪು ಆದ್ಯತೆಗಳ ಕಾರಣದಿಂದಾಗಿ ಬಂಗಾರದ ಮೇಲಿನ ಸಾಲ ಬಾಕಿ ಹೆಚ್ಚಾಗುತ್ತಿದೆ. ಮಹಿಳೆಯರ ಮಂಗಳಸೂತ್ರ 'ಕಳುವಿಗೆ' ಸರ್ಕಾರ ಹೊಣೆ ಎಂದು ಕಾಂಗ್ರೆಸ್ ಆರೋಪಿಸಿದೆ.

**ಕಾಂಗ್ರೆಸ್ ಆರೋಪ**

ಬಂಗಾರದ ಮೇಲೆ ಸಾಲ ಪಡೆದವರ ಪೈಕಿ ಶೇ.30ರಷ್ಟು ಜನ ಸಾಲ ಬಾಕಿದಾರರಾಗಿದ್ದಾರೆ. ಇದರಿಂದಾಗಿ ಮಹಿಳೆಯರು ತಮ್ಮ ಮಂಗಳಸೂತ್ರ ಸೇರಿದಂತೆ ಬಂಗಾರ ಕಳೆದುಕೊಳ್ಳುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ವರದಿಗಳನ್ನು ಉಲ್ಲೇಖಿಸಿರುವ ಜೈರಾಮ್ (2ನೇ ಪುಟಕ್ಕೆ)

## ಬಜೆಟ್‌ನಲ್ಲಿ 'ವಿಶ್ವ ಸಮ್ಮೇಳನಕ್ಕೆ' ಅನುದಾನ ಕೊಡಿ

### ಜ.4ರಂದು ಉಸ್ತುವಾರಿ ಸಚಿವರಿಗೆ, ಜ.5ರಂದು ಸಿಎಂಗೆ ಮನವಿ ಕೊಡಲು ತೀರ್ಮಾನ



ದಾವಣಗೆರೆ, ಜ.2- ಬರುವ ಮಾರ್ಚ್ ತಿಂಗಳಿನಲ್ಲಿ ಮಂಡಿಸಲಿರುವ ಬಜೆಟ್‌ನಲ್ಲಿ 'ವಿಶ್ವ ಕನ್ನಡ ಸಮ್ಮೇಳನಕ್ಕೆ' ಅವಕಾಶ ಕಾಯ್ದಿರಿಸುವ ಜತೆಗೆ ಅನುದಾನ ಬಿಡುಗಡೆ ಮಾಡಬೇಕೆಂದು ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಸರ್ಕಾರಕ್ಕೆ ಒತ್ತಾಯಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ವಿಶ್ವ ಕನ್ನಡ ಸಮ್ಮೇಳನ' ಆಯೋಜಿಸಲು ಒತ್ತಾಯಿಸುವ ಪೂರ್ವಭಾವಿ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಗರದಲ್ಲಿ ಈ ಹಿಂದೆ ನಡೆದ ಕಾನಿಪ ರಾಜ್ಯಮಟ್ಟದ ಸಮ್ಮೇಳನದಲ್ಲಿ ಕಳೆದ ಬಜೆಟ್‌ನಲ್ಲೇ ಅನುದಾನ ಘೋಷಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದೆವು. ಆದರೆ ಆಗಿನ ಬಜೆಟ್‌ನಲ್ಲಿ ನಮ್ಮ ಬೇಡಿಕೆ ಈಡೇರಲಿಲ್ಲ ಎಂದು ತಿಳಿಸಿದರು.

ಈ ಹಿಂದೆ 2017ರಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕೆ 30 ಕೋಟಿ ರೂ. ಬಿಡುಗಡೆಯಾಗಿತ್ತು. ಆಗ ಸಮಿತಿ ರಚನೆಯಾಗಿ, 5 ನೂರು ಪುಟಗಳ ವರದಿಯನ್ನೂ ಮಂಡಿಸಿದ್ದರು. ಇಂದು ಇದಕ್ಕೆ ಪುನಶ್ಚೇತನ ನೀಡಬೇಕಿರುವುದು ಪ್ರತಿ ಕನ್ನಡಿಗನ ಕರ್ತವ್ಯ ಆಗಿದೆ ಎಂದು ಹೇಳಿದರು.

**ಜಿಲ್ಲೆಯಲ್ಲಿನ ಎಲ್ಲಾ ಶಾಸಕರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುವ ಮೂಲಕ ಸಮ್ಮೇಳನವನ್ನು ನಗರದಲ್ಲೇ ಆಯೋಜಿಸುವಂತೆ ಸಿಎಂ ಮೇಲೆ ಒತ್ತಡ ಹೇರುವ ಕಾರ್ಯ ಮಾಡಬೇಕು.**

**- ರಾಜಶೇಖರ್ ಗುಂಡಗತ್ತಿ, ಚುಸಾಪ ಅಧ್ಯಕ್ಷ**

ವಿಶ್ವ ಕನ್ನಡ ಸಮ್ಮೇಳನಕ್ಕೆ ದಾವಣಗೆರೆಯಲ್ಲಿ ಅವಕಾಶ ಕೊಡದಿದ್ದರೆ ಸರ್ಕಾರದ ವಿರುದ್ಧ ಧ್ವನಿ ಎತ್ತುವ ಕಾರ್ಯವನ್ನು ಎಲ್ಲ ಕನ್ನಡಿಗರು ಮಾಡಬೇಕು. ಆದ್ದರಿಂದ ನಮ್ಮ ಕೂಗಿಗೆ ಶಕ್ತಿ ಬರಲು, ಎಲ್ಲಾ ಜನರು ಒಕ್ಕೊರಲಿನಿಂದ ಸರ್ಕಾರಕ್ಕೆ ಆಗ್ರಹಿಸಬೇಕು ಎಂದರು.

ಜ.4ರಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮತ್ತು ಜ.5ರ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿ ಮನವೊಲಿಸುವ ಕಾರ್ಯ ಮಾಡೋಣ ಎಂದು ಹೇಳಿದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಕನ್ನಡ ಪರ ವೇದಿಕೆ, ರೈತ ಸಂಘ ಹಾಗೂ ಇತರೆ ಸಂಘಟನೆಯವರು ನಮ್ಮ ಜೊತೆಗೆ 'ವಿಶ್ವ ಕನ್ನಡ ಸಮ್ಮೇಳನಕ್ಕೆ' ಧ್ವನಿ ಎತ್ತಬೇಕು ಎಂದು ಮನವಿ ಮಾಡಿದರು. (2ನೇ ಪುಟಕ್ಕೆ)

## ಮನು, ಗುಕೇಶ್ ಸೇರಿ ನಾಲ್ವರಿಗೆ ಖೇಲ್ ರತ್ನ ಪ್ರಶಸ್ತಿ

ನವದೆಹಲಿ, ಜ. 2- ಒಲಂಪಿಕ್ ಪಂದ್ಯಾವಳಿಯಲ್ಲಿ ಅವಳಿ ಪದಕ ಪಡೆದ ಮನು ಭಾಕರ್ ಹಾಗೂ ಚೆಸ್ ಚಾಂಪಿಯನ್ ಗುಕೇಶ್ ಸೇರಿದಂತೆ ನಾಲ್ವರಿಗೆ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ನೀಡಲಾಗಿದೆ. ಕೇಂದ್ರ ಕ್ರೀಡಾ ಸಚಿವಾಲಯ ಈ ಘೋಷಣೆ ಮಾಡಿದ್ದು, 32 ಜನರಿಗೆ ಅರ್ಜುನ ಪ್ರಶಸ್ತಿ ಪ್ರಕಟಿಸಲಾಗಿದೆ. ಅರ್ಜುನ ಪ್ರಶಸ್ತಿ ಪಡೆದವರಲ್ಲಿ 17 ಜನರು ಪ್ಯಾರಾ ಅಥ್ಲೀಟ್‌ಗಳಾಗಿದ್ದಾರೆ. ಪುರುಷರ ಹಾಕಿ ತಂಡದ ನಾಯಕ ಹರ್ಮಾನ್ ಪ್ರೀತ್‌ಸಿಂಗ್ ಹಾಗೂ ಪ್ಯಾರಾ ಅಥ್ಲೀಟ್ ಪ್ರವೀಣ್ ಕುಮಾರ್ ಸಹ ಖೇಲ್ ರತ್ನ ಪ್ರಶಸ್ತಿ ಪಡೆದಿದ್ದಾರೆ.


## ಜಿಲ್ಲೆಯ ಐವರಿಗೆ 'ಮಾಧ್ಯಮ ಅಕಾಡೆಮಿ' ಪ್ರಶಸ್ತಿ



ಬೆಂಗಳೂರು, ಜ. 2 - ಕರ್ನಾಟಕ ಮಾಧ್ಯಮ ಅಕಾಡೆಮಿಯು ತನ್ನ ವಾರ್ಷಿಕ ಪ್ರಶಸ್ತಿಗಳನ್ನು ಇಂದು ಸಂಜೆ ಘೋಷಿಸಿದ್ದು, ದಾವಣಗೆರೆ ಜಿಲ್ಲೆಯ ಐವರು ಪತ್ರಕರ್ತರು ಆಯ್ಕೆಯಾಗಿದ್ದಾರೆ. ಪ್ರಜಾವಾಣಿ ಸ್ಥಾನಿಕ ಸಂಪಾದಕ ಸಿದ್ದಯ್ಯ ಹಿರೇಮಠ, ದೂರದರ್ಶನದ ಎ.ಎಲ್.ತಾರಾನಾಥ, ವಿಜಯವಾಣಿ ಹಿರಿಯ ವರದಿಗಾರ ರಮೇಶ ಜಹಗೀರದಾರ್, ಸುಭಾಷಿತ ಪತ್ರಿಕೆ ಸಂಪಾದಕ ಕೆ.ಜೈಮುನಿ ಹಾಗೂ ಹರಿಹರದ ಲೋಕಪ್ರಭ ಪತ್ರಿಕೆ ಸಂಪಾದಕರಾದ ಡಿ.ಎನ್.ಶಾಂಭವಿ ನಾಗರಾಜ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಕರ್ನಾ ಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯಿಷಾ ಖಾನಂ ಅವರು ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಬಿಡುಗಡೆ ಮಾಡಿದರು.

## ಶಿವ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಎಂ.ಬಿ. ಸಂಗಮೇಶ್ವರಗೌಡರು

### ಉಪಾಧ್ಯಕ್ಷರಾಗಿ ಐಗೂರು ಸಿ. ಚಂದ್ರಶೇಖರ್





ದಾವಣಗೆರೆ, ಜ. 2 - ಸ್ಥಳೀಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಶಿವ ಸಹಕಾರಿ ಬ್ಯಾಂಕ್ ಆಡಳಿತ ಮಂಡಳಿಯ ಹಾಲಿ ಅಧ್ಯಕ್ಷ ಮಾಗನೂರು ಸಂಗಮೇಶ್ವರ ಗೌಡ್ರು ಅಧ್ಯಕ್ಷರಾಗಿ ಮತ್ತು ಹಾಲಿ ಉಪಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಂ.ಬಿ. ಸಂಗಮೇಶ್ವರಗೌಡರ ಹೆಸರನ್ನು ನಿರ್ದೇಶಕ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಸೂಚಿಸಿದಾಗ, ನಿರ್ದೇಶಕ ದೊಗ್ಗಳ್ಳಿ ಬಸವರಾಜ್ ಅನುಮೋದಿಸಿದರು. ಐಗೂರು ಸಿ. ಚಂದ್ರಶೇಖರ್ ಅವರ ಹೆಸರನ್ನು ನಿರ್ದೇಶಕ ಜೆ.ಎಸ್. ಸಿದ್ದಪ್ಪ ಸೂಚಿಸಿದಾಗ ಡಿ.ಎಂ. ಶಿವಕುಮಾರ್ ಅನುಮೋದಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರುಗಳಾದ ಸಿ. ದೊಡ್ಡಬಸಪ್ಪ, ಜಯಣ್ಣ ಹೆಚ್. ರಾಮಗೊಂಡನಹಳ್ಳಿ, ವಾಗೀಶ್ ಬಾಬು ಜಿ.ಪಿ. ಶ್ರೀಮತಿ ಉಮಾ ಡಿ.ಹೆಚ್., ಶ್ರೀಮತಿ ಕೆ.ಜಿ. ಶಂಕ್ರಮ್ಮ, ಮತ್ತು (2ನೇ ಪುಟಕ್ಕೆ)


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ನಗರ ವಾಸಿ

**ಶ್ರೀಮತಿ ಹೆಚ್.ವಿ. ಅನುಸೂಯಮ್ಮ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 30.12.2024ನೇ ಸೋಮವಾರ ಮಧ್ಯಾಹ್ನ 2.00ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಹಳ್ಳಳ್ಳಿ ವಿಶ್ವನಾಥಪ್ಪ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 03.01.2025ನೇ ಶುಕ್ರವಾರ ಮಧ್ಯಾಹ್ನ 12.00ಕ್ಕೆ ಮೃತರ ಸ್ವಗೃಹದಲ್ಲಿ # 5090/28, 7ನೇ ಮೇನ್, ಎಸ್.ಎಸ್. ಲೇಔಟ್, 'ಎ' ಬ್ಲಾಕ್, ದಾವಣಗೆರೆ-4.

ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಹೆಚ್.ವಿ. ಅನುಸೂಯಮ್ಮ ಮತ್ತು ಮಕ್ಕಳು

ಸೊಸೆಯಂದಿರು, ಮೊಮ್ಮಕ್ಕಳು, ಹಳ್ಳಳ್ಳಿ ವಂಶಸ್ಥರು, ದಾವಣಗೆರೆ-4.

ಮೊ. : 98800 44600, 98802 95959

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಚುನಾವಣಾ ಕಣದಿಂದ ನಿವೃತ್ತಿ**

**ಬಲರಾಮ ಶೆಟ್ಟಿ ಆರ್.ವಿ. ಹರಿಹರ**

**ಮಾನ್ಯ ಮತದಾರರಲ್ಲಿ ವಿನಂತಿ**

5 ವರ್ಷಗಳ ಅವಧಿಗೆ ದಿನಾಂಕ 05-01-2025ರ ಭಾನುವಾರದಂದು ಎ.ಜಿ.ಬಿ. ಕಾಲೇಜ್, ವನಿತಾ ಸಮಾಜದ ಎದುರು, ದಾವಣಗೆರೆ ಇಲ್ಲಿ ನಡೆಯುವ

**ಶ್ರೀ ಕನ್ನಿಕಾಪರಮೇಶ್ವರಿ ಕೋ- ಆಪ್. ಬ್ಯಾಂಕ್ ಲಿ., ದಾವಣಗೆರೆ**

#165/1-2, 3ನೇ ಮೇನ್, ಶ್ರೀ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002

ಇದರ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಉಮೇದುವಾರನಾಗಿ ನಾನು ಆರ್.ವಿ. ಬಲರಾಮ ಶೆಟ್ಟಿ ಸ್ಪರ್ಧಿಸಿದ್ದು ಅನಿವಾರ್ಯ ಕಾರಣಗಳಿಂದ ಚುನಾವಣಾ ಕಣದಿಂದ ನಿವೃತ್ತಿ ಹೊಂದಿರುತ್ತೇನೆ. ಪ್ರಯುಕ್ತ

**ಆರ್.ಎಲ್. ಪ್ರಭಾಕರ್ ಮತ್ತು ಆರ್.ಜಿ. ಶ್ರೀನಿವಾಸಮೂರ್ತಿ**

**ಇವರ ಗುಂಪಿನ ಎಲ್ಲಾ 13 ಉಮೇದುವಾರರಿಗೆ ನನ್ನ ಬೆಂಬಲವನ್ನು ಘೋಷಿಸಿರುತ್ತೇನೆ.**

## ಎಸ್ಸೆಸ್ ಆರೋಗ್ಯ ವಿಚಾರಿಸಿದ ಶ್ರೀ

**(1ನೇ ಪುಟದಿಂದ)** ತಿಳಿಸಿದ ತಕ್ಷಣವೇ ಶ್ರೀಗಳು ಖುದ್ದಾಗಿ ಆಸ್ಪತ್ರೆಗೆ ತೆರಳಿ ಶಿವಶಂಕರಪ್ಪನವರ ಕುಶಲೋಪರಿ ವಿಚಾರಿಸಿದರು. ಶಾಲು ಹೊದಿಸಿ, ಹಾರ ಹಾಕಿ, ಶತೋತ್ತರ ಆಯುಷಿಯಾಗುವಂತೆ ಆಶೀರ್ವದಿಸಿದರು.

ಈ ವೇಳೆ ಶಿವಶಂಕರಪ್ಪನವರು, ಪ್ರತಿಯೊಬ್ಬರಿಗೂ ಸನ್ಮಾರ್ಗ ತೋರಿಸುವ ಗುರುವಿನ ಅಗತ್ಯತೆ ಬಹಳವಿದೆ. ಸನ್ಮಾರ್ಗದಲ್ಲಿ ಹೋದರೆ ಮಾತ್ರ ಒಳಿತಾಗುತ್ತದೆ. ಕೆಟ್ಟ ಮಾರ್ಗದಲ್ಲಿ ಹೋದರೆ ಕೆಡುಕಾಗುತ್ತದೆ. ಇದು ಗೊತ್ತಿದ್ದರೂ ಯಾವುದು ಸರಿಯಾದ ಮಾರ್ಗ, ಅಪಮಾರ್ಗ ಅನ್ನುವುದು ಅರ್ಥವಾಗುವುದಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಉತ್ತಮ ಮಾರ್ಗದರ್ಶಕರಾಗಿ ಸದಾಕಾಲ ಶಿಷ್ಯರ ಹಿತ ಬಯಸುವ ತಾವೇ ನಮ್ಮ ಗುರುಗಳು ಎಂದು ಭಾವುಕರಾದರು.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ನಿವೃತ್ತ ಪೊಲೀಸ್ ಮಹಾ ನಿರೀಕ್ಷಕ ಶಂಕರ್ ಬಿದರಿ ಈ ವೇಳೆ ಉಪಸ್ಥಿತರಿದ್ದರು.

## ಅಧ್ಯಕ್ಷರಾಗಿ ಸಂಗಮೇಶ್ವರಗೌಡರು

**(1ನೇ ಪುಟದಿಂದ)** ಶ್ರೀಮತಿ ಅನಿತ ಡಿ.ಎಲ್. ಇವರು ಉಪಸ್ಥಿತರಿದ್ದರು. ದಾವಣಗೆರೆ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಎಸ್. ಮಂಜುಳ ಅವರು ಅವಿರೋಧ ಆಯ್ಕೆಯನ್ನು ಘೋಷಿಸಿದರು.

## ರಾಜ್ಯದಲ್ಲಿ ಹೊಸ ಗೋಶಾಲೆ ಆರಂಭಿಸದಿರಲು ನಿರ್ಧಾರ

**(1ನೇ ಪುಟದಿಂದ)** 100 ಕೋಟಿ ರೂ. ವೆಚ್ಚದಲ್ಲಿ 200 ಪಶು ವೈದ್ಯ ಆಸ್ಪತ್ರೆಗಳ ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೊಟ್ಟಿದೆ. ಸಾರಿಗೆ ಸಂಸ್ಥೆಗಳಲ್ಲಿನ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಪಾವತಿಸಲು 2,000 ಕೋಟಿ ರೂ. ಸಾಲ ಪಡೆಯಲು ಸರ್ಕಾರದ ಗ್ಯಾರಂಟಿ ನೀಡಿದೆ.

# ಪ್ರೀತಿ, ಭಕ್ತಿ, ಗೌರವಗಳಿಂದ ಮಾತ್ರ ಶಾಂತಿ, ಸಾಮರಸ್ಯದ ಬದುಕು ಸಾಧ್ಯ

### ಯಲವಟ್ಟಿ : ಸತ್ಸಂಗ ಕಾರ್ಯಕ್ರಮದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್ ಅಭಿಮತ



ಮಲೇಬೆನ್ನೂರು, ಜ.2- ಪರಸ್ಪರ ಪ್ರೀತಿ, ಭಕ್ತಿ, ಗೌರವದಿಂದ ಮಾತ್ರ ಶಾಂತಿ, ಸಾಮರಸ್ಯದ ಬದುಕು ಸಾಧ್ಯವಾಗುತ್ತದೆ. ಅಂತಹ ಪ್ರೀತಿ, ಭಕ್ತಿ, ಗೌರವಗಳನ್ನು ನಮಗೆ ಮಠ-ಮಂದಿರಗಳು ಮೊದಲಿನಿಂದಲೂ ಕಲಿಸುತ್ತಾ ಬಂದಿವೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್ ಹೇಳಿದರು.

ಯಲವಟ್ಟಿಯ ಶ್ರೀ ಗುರುಸಿದ್ಧಾಶ್ರಮದಲ್ಲಿ ಎಳ್ಳು ಅಮಾವಾಸ್ಯೆ ಅಂಗವಾಗಿ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಅವರು ಮಾತನಾಡಿದರು.

ಶರಣರು, ದಾರ್ಶನಿಕರು, ಋಷಿ ಮುನಿಗಳು ಹುಟ್ಟಿದ ಈ ನೆಲದಲ್ಲಿ ಜಾತಿ, ಧರ್ಮಕ್ಕಿಂತ ಪ್ರೀತಿ, ಮಾನವೀಯತೆ, ಸಾಮರಸ್ಯ ಬಹಳ ಎತ್ತರದ ಸ್ಥಾನದಲ್ಲಿವೆ. ಯಾವ ಧರ್ಮದಲ್ಲೂ ಅಹಿಂಸೆಗೆ ಅವಕಾಶ ಇಲ್ಲ. ಎಲ್ಲಾ ಧರ್ಮಗಳೂ ಸಕಲ ಜೀವ ರಾಶಿಗಳಿಗೆ ಲೇಸನ್ನೇ ಬಯಸುತ್ತಾ ಬಂದಿವೆ. ಅಧರ್ಮದ ವಿರುದ್ಧ ಧರ್ಮ ಗೆಲ್ಲಬೇಕೆಂಬ ಉದ್ದೇಶ ದಿಂದ ಮಹಾಭಾರತ ಕಾಲದಲ್ಲಿ ಅಹಿಂಸೆಗಳು ನಡೆದಿವೆ ಎಂದು ಮಂಜುನಾಥ್ ತಿಳಿಸಿದರು.

ಪ್ರಸ್ತುತ ವಿಜ್ಞಾನದಲ್ಲಿ ನಾವು ಎಷ್ಟೇ ಪ್ರಗತಿ ಸಾಧಿಸಿದ್ದರೂ ಜ್ಞಾನ, ಭಕ್ತಿ, ನಂಬಿಕೆ, ಗೌರವ, ಮಾನವೀಯತೆ, ಪ್ರೀತಿ ಬಹಳ ಮುಖ್ಯವಾಗಿವೆ. ಅಂತಹವುಗಳನ್ನು ನಾವು ಶಾಲೆ - ದೇವಸ್ಥಾನ - ಮಠಗಳಲ್ಲಿ ಮಾತ್ರ ಕಾಣಲು ಸಾಧ್ಯ ಎಂದ ಮಂಜುನಾಥ್ ಅವರು, ಮಕ್ಕಳು ಬರೀ ಬುದ್ಧಿವಂತರಾದರೆ ಸಾಲದು ಹೃದಯವಂತಿಕೆ, ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕೆಂದರು.

ಹೃದಯವಂತಿಕೆ ಮಾನವೀಯತೆ ಇದ್ದವರು ಜ್ಞಾನಿಗಳಾಗುತ್ತಾರೆ ಎಂಬುದಕ್ಕೆ ಬುದ್ಧ, ಬಸವಣ್ಣ, ವಿವೇಕಾನಂದರು, ಗಾಂಧೀಜಿ, ಅಂಬೇಡ್ಕರ್ ಸೇರಿದಂತೆ ಇನ್ನೂ ಅನೇಕರನ್ನು ಹೆಚ್.ಎಸ್.ಮಂಜುನಾಥ್ ಉದಾಹರಣೆ ನೀಡಿದರು.

ಗ್ರಾಮದ ಮುಖಂಡ ಡಿ.ಯೋಮಕೇಶ್ವರಪ್ಪ ಮಾತನಾಡಿ, ಬುದ್ಧ ಮಾನವಕುಲಕ್ಕೆ ಒಳ್ಳೆಯದನ್ನು ಬಯಸಿದ್ದರಿಂದ ಅವರು ಜಗತ್ಪ್ರಸಿದ್ಧರಾದರು. ದಾಸ ಪರಂಪರೆ, ಶರಣ ಪರಂಪರೆ ಮತ್ತು ಆರೂಢ ಪರಂಪರೆ ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗದೇ ಎಲ್ಲರಿಗೂ ಲೇಸನ್ನೇ ಬಯಸಿವೆ ಎಂದು ಹೇಳಿದರು.

ಪ್ರಗತಿಪರ ಕೃಷಿಕ ಸಿರಿಗೆರೆ ಕುಂದೂರು ಮಂಜಪ್ಪ ಮಾತನಾಡಿ, ಎಲ್ಲಾ ಧರ್ಮಗಳ ಸಮನ್ವಯದ ಪುಣ್ಯಭೂಮಿಯಾಗಿ ಭಾರತ ದೇಶ ಬೆಳೆದು ಬಂದಿದೆ ಎಂದರು.

ಅಧ್ಯಾತ್ಮಿಕ ಚಿಂತಕ ಸಿರಿಗೆರೆಯ ಡಿ.ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಸತ್ಯದ ಅನ್ವೇಷಣೆಯೇ ಸತ್ಸಂಗವಾಗಿದೆ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಸಕಲ ಜೀವರಾಶಿಗಳ ಪೈಕಿ ಮನುಷ್ಯನಿಗೆ ಮಾತ್ರ ಭಗವಂತ ವಿಶೇಷವಾದ ಜ್ಞಾನ, ಬುದ್ಧಿ, ಶಕ್ತಿ ಕೊಟ್ಟಿದ್ದಾನೆ. ಮನುಷ್ಯ ಅಂತಹ ವಿಶೇಷವಾದ ಜ್ಞಾನ, ಬುದ್ಧಿವಂತಿಕೆ ಬಳಸಿಕೊಂಡು ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕೆಂದು ಹೇಳಿದರು.

ಗ್ರಾಮದ ಜಿ.ಆಂಜನೇಯ, ಜಿ.ಬಸಪ್ಪ ಮೇಷ್ಟ್ರು, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಿವೃತ್ತ ಯೋಧ ಶಿವಕುಮಾರ್, ಟಿ.ಮಂಜಪ್ಪ, ಎ. ಸುರೇಶ್, ಹೊರಟ್ಟಿ ಕರಿಬಸಪ್ಪ, ವೈ.ಸುರೇಶ್ ಶೆಟ್ಟಿ, ಎ.ಜಗದೀಶ್, ಮದಕರಿ, ಡಿ.ರಾಜಪ್ಪ, ಕುಂಬಳೂರಿನ ಭೂಪಾಲಪ್ಪ, ಪರಮೇಶ್ವರಪ್ಪ, ನಾಗರಾಜ್, ಸದಾಶಿವ, ಸಿರಿಗೆರೆಯ ಮಾಗೋಡ್ ಸಿದ್ದಣ್ಣ, ಮಲ್ಲಾಡರ ಕೃಷ್ಣಪ್ಪ, ಹನುಮಂತಪ್ಪ, ಜಿಗಳಿಯ ನಾಗಸನಹಳ್ಳಿ ಮಹೇಶ್ವರಪ್ಪ, ಬಿ.ನಿಂಗಾಚಾರಿ, ಪತ್ರಕರ್ತ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಯಲವಟ್ಟಿ ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿ, ವಂದಿಸಿದರು.

ಜಿಗಳಿ ಮತ್ತು ಯಲವಟ್ಟಿ ಭಜನಾ ತಂಡದವರು ಭಜನೆ ಮಾಡಿದರು. ಕುಂಬಳೂರಿನ ಕೆ.ಕುಬೇರಪ್ಪ, ಸಿರಿಗೆರೆಯ ಹೆಚ್.ಎಸ್.ವೆಂಕಟೇಶ್ ಗೌಡ ಭಕ್ತಿಗೀತೆ ಹಾಡಿದರು.

ಯಲವಟ್ಟಿಯ ಹೊಸಮನಿ ಮಲ್ಲಪ್ಪ ಕಾರ್ಯಕ್ರಮದ ದಾಸೋಹಿಗಳಾಗಿದ್ದರು.

### ಐದು ವರ್ಷಕ್ಕೊಮ್ಮೆ ನಡೆಯುವ ಹೋತನಹಳ್ಳಿ ಗ್ರಾಮದೇವಿ ಜಾತ್ರೆ ವಿಶೇಷ

# ಐದು ಮಂಗಳವಾರ ಊರು ಬಿಡುವ ಪದ್ದತಿ..!



ಹಾವೇರಿ,ಜ.2- ಬರುವ ಫೆಬ್ರವರಿಯಲ್ಲಿ ನಡೆಯುವ ಗ್ರಾಮದೇವಿ ಜಾತ್ರೆಗೆ ಐದು ಮಂಗಳವಾರ ದಿನಪೂರ್ತಿ ಗ್ರಾಮ ತೊರೆದು ಹೊರವಲಯದ ಹೊಲ-ಗದ್ದೆಗಳಲ್ಲಿದ್ದು, ಸಂಜೆ ಮನೆಗೆ ತೆರಳುವ ಪದ್ದತಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕು ಹೋತನಹಳ್ಳಿ ಗ್ರಾಮದಲ್ಲಿ ನಡೆಯುತ್ತಿದ್ದು, ನಿನ್ನೆ ಆಚರಣೆಗೊಂಡ ಈ ಗ್ರಾಮ ತೊರೆಯುವ ಪದ್ಧತಿ ಜ.28 ರವರೆಗೆ ಒಟ್ಟು ಐದು ವಾರ ನಡೆಯುವುದು.

ಈಗಾಗಲೇ ಮಾಸನಕಟ್ಟಿ, ಬೆಳಗಾಲ ಪೇಟೆ, ಬೊಮ್ಮನಹಳ್ಳಿ, ಹುನಗುಂದ, ಶಿಡ್ಲಾಪುರ ಹಾಗೂ ಹೂಲಿಕಟ್ಟಿ ರಸ್ತೆಗಳ ಮುಖ್ಯ ದ್ವಾರಗಳಲ್ಲಿ ದಿಗ್ಬಂಧನದ ನಾಮಫಲಕ ಹಾಕಲಾಗಿದ್ದು, ಆ ದಿನಗಳಂದು ಬೆಳಿಗ್ಗೆ 6 ರಿಂದ ಸಂಜೆ 6.30 ರವರೆಗೆ ರಾಜ್ಯ ಸಾರಿಗೆ ವಾಹನಗಳು ಸೇರಿದಂತೆ ಯಾವ ವಾಹನಗಳೂ ಸಂಚರಿಸುವುದಿಲ್ಲ ಎನ್ನಲಾಗಿದೆ.

ಗ್ರಾಮಸ್ಥರು ಅಂದು ಸೂರ್ಯೋದಯದ ಮುನ್ನ ಮನೆಯಲ್ಲಿರುವ ಅಡುಗೆ ಸಾಮಗ್ರಿಗಳ ಜೊತೆ ದನ-ಕರು, ಕುರಿ, ಆಡು, ಕೋಳಿ, ನಾಯಿ. ಬೆಕ್ಕುಗಳು ಸೇರಿದಂತೆ ಹಾಸಿಗೆ, ಬಟ್ಟೆಗಳನ್ನು ತೆಗೆದುಕೊಂಡು ಮನೆ, ಪಡಸಾಲೆ ಹಾಗೂ ಅಂಗಳದಲ್ಲಿ ದೀಪ ಹಚ್ಚಿ, ಬಾಗಿಲಿಗೆ ಬೀಗ ಹಾಕಿ ಮಹಿಳೆಯರು ಮಕ್ಕಳೊಂದಿಗೆ ಸೇರಿ ತಮ್ಮಲ್ಲಿರುವ ವಾಹನಗಳೊಂದಿಗೆ ಊರು ಬಿಡುತ್ತಾರೆ. ಸಾಮೂಹಿಕವಾಗಿ ಊಟ- ಉಪಚಾರದ ನಂತರ ಸಂಜೆವರೆಗೆ ಕಾಲಕಳೆದು ಗ್ರಾಮಕ್ಕೆ ಮರಳುತ್ತಾರೆ.

ಜ. 31ರಂದು ದೇವಿಗೆ ದೃಷ್ಟಿ ಇಡುವುದು, ಫೆ.1 ಚಂಡಿ ಪಾರಾಯಣ, ಫೆ. 2 ರಂದು ಗಣಪತಿ ಪೂಜೆ, ಹೋಮ ಸಂಕಲ್ಪ, ಚಂಡಿ ಪಾರಾಯಣ, ಚಂಡಿಕಾ ಹವನ, ಮಹಾಮಂಗಳಾರತಿ ನಡೆಯುವುದು, ಫೆ. 3ರಂದು ಹೋಮ, ಫೆ. 4ರಂದು ಅರ್ಚಕರ ಕಾರ್ಯಕ್ರಮ, ರಾತ್ರಿ ರಥೋತ್ಸವ ನಡೆಯಲಿದೆ. ಫೆ. 5ರಂದು ಗದ್ದುಗೆ ಹಾಕುವುದು, ಫೆ. 6 ರಿಂದ 11 ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಕೊನೆಯಲ್ಲಿ ಫೆ. 12ರಂದು ಪಾದಗಟ್ಟಿ ಬಿಡುವುದು ಸೇರಿದಂತೆ ಪದ್ದತಿ ಪ್ರಕಾರ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

## ಮಹಿಳೆಯರ ಮಂಗಳ ಸೂತ್ರ 'ಕಳುವಿಗೆ' ಸರ್ಕಾರ ಕಾರಣ

**(1ನೇ ಪುಟದಿಂದ)** ರಮೇಶ್, ಸುಮಾರು 3 ಲಕ್ಷ ಕೋಟಿ ರೂ.ಗಳ ಬಂಗಾರದ ಸಾಲ ಇದುವರೆಗೂ ಬಾಕಿ ಉಳಿದಿದೆ ಎಂದಿದ್ದಾರೆ. ಸಾಲದ ಹೊರೆ ಹೆಚ್ಚಾಗುತ್ತಿದೆ ಹಾಗೂ ಆರ್ಥಿಕತೆ ಮಂದವಾಗುತ್ತಿದೆ ಎಂಬುದು ಈಗ ಕಂಡು ಬರುತ್ತಿದೆ. ಕುಟುಂಬಗಳು ಪಡೆದಿರುವ ಸಾಲದ ಬಾಕಿ ಹೆಚ್ಚಾಗುತ್ತಿದೆ ಎಂದವರು ಹೇಳಿದ್ದಾರೆ.

2026ರ ಮಾರ್ಚ್‌ನಿಂದ ಜೂನ್ ನಡುವೆ ಬಂಗಾರದ ಸಾಲದ ಎನ್‌ಪಿಎ ಶೇ. 30ರಷ್ಟು ಹೆಚ್ಚಾಗಿ 6,690 ಕೋಟಿ ರೂ.ಗಳಿಗೆ ತಲುಪಿದೆ. ಇದು ಔಪಚಾರಿಕ ವಲಯದ ಬಂಗಾರದ ಸಾಲ ಮಾತ್ರವಾಗಿದೆ.

ಅನೌಪಚಾರಿಕ ವಲಯದಲ್ಲಿ ಎಷ್ಟು ಕುಟುಂಬಗಳು ಸಾಲ ಪಡೆದಿವೆ ಎಂಬುದರ ಸ್ಪಷ್ಟನೆ ಇಲ್ಲ ಎಂದು ರಮೇಶ್ ಹೇಳಿದ್ದಾರೆ.

ಕುಟುಂಬಗಳು ಈ ಸಾಲದ ಬಾಕಿದಾರನಾದಾಗ ಬಂಗಾರದ ಆಸ್ತಿಗಳನ್ನು ಕಳೆದುಕೊಳ್ಳುತ್ತಾರೆ. ಬಹುತೇಕ ಪ್ರಕರಣಗಳಲ್ಲಿ ಮಹಿಳೆಯರು ಮಂಗಳಸೂತ್ರ ಸೇರಿದಂತೆ ಆಭರಣಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ರಮೇಶ್ ಆರೋಪಿಸಿದ್ದಾರೆ.

# ಹರಿಹರ ನಗರಸಭೆ ಬಜೆಟ್ ಪೂರ್ವಭಾವಿ ಸಭೆ ಮುಂದೂಡಿಕೆ



ಹರಿಹರ, ಜ.2- ನಗರಸಭೆ ಸಭಾಂಗಣದಲ್ಲಿ ಇಂದು ನಿಗದಿ ಆಗಿದ್ದ ಬಜೆಟ್ ಪೂರ್ವಭಾವಿ ಪ್ರಥಮ ಸಭೆಯನ್ನು ಸಾರ್ವಜನಿಕರಿಗೆ ಮಾಹಿತಿ ಕೊರತೆ ಕಾರಣದಿಂದ ಮುಂದೂಡಿರುವುದಾಗಿ ನಗರಸಭೆ ಅಧ್ಯಕ್ಷೆ ಕವಿತಾ ತಿಳಿಸಿದರು.

ಸಭೆ ಆರಂಭದಲ್ಲೇ ನಗರಸಭೆ ಸದಸ್ಯ ಮುಜಾಮಿಲ್ ಬಿಲ್ಲು, ನಾಮ ನಿರ್ದೇಶನ ಸದಸ್ಯ ಕೆ.ಬಿ. ಮಾಜಿ ರಾಜಶೇಖರ್, ಶಿವಪ್ರಕಾಶ್ ಶಾಸ್ತ್ರಿ, ತಾಪಂ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ ಇವರು ನಗರಸಭೆ ಸಭಾಂಗಣದಲ್ಲಿ ಬಜೆಟ್ ಪೂರ್ವಭಾವಿ ಸಭೆ ನಡೆಯುವುದರ ಬಗ್ಗೆ ಅನೇಕ ಕನ್ನಡ ಪರ ಸಂಘಟನೆಯವರಿಗೆ, ವಿವಿಧ ಸಮಾಜದವರಿಗೆ, ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ಮಾಹಿತಿ ಇಲ್ಲದೇ ಇರುವುದರಿಂದ ಅವರು ಸಭೆಯಲ್ಲಿ ಭಾಗವಹಿಸಲು ಅವಕಾಶ ಇಲ್ಲದಂತೆ ಆಗಿದೆ.

ಜೊತೆಗೆ ಕೆಲವೊಂದು ಪತ್ರಿಕೆಯವರಿಗೆ ಮಾತ್ರ ಸಭೆಯನ್ನು ಆಯೋಜಿಸಿರುವ ವಿಚಾರಗಳನ್ನು ಮೇಲ್ ಮಾಡಿ, ಉಳಿದಂತೆ ಅನೇಕ ಪತ್ರಕರ್ತರಿಗೆ ಈ ಸಭೆಯ ಬಗ್ಗೆ ಮಾಹಿತಿ ನೀಡಿರುವುದಿಲ್ಲ ಅಲ್ಲದೇ ಬಹಳಷ್ಟು ನಗರಸಭೆ ಸದಸ್ಯರಿಗೂ ಕೂಡ ಸಭೆಯನ್ನು ಆಯೋಜಿಸಿರುವ ವಿಚಾರ ಗೊತ್ತಿಲ್ಲದೇ ಅವರು ಕೂಡ ಸಭೆಗೆ ಬಂದಿಲ್ಲ.

ನಗರದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆ, ಅನೇಕ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಆಗುತ್ತದೆ ಆದ್ದರಿಂದ ಈ ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡುವಂತೆ ತಿಳಿಸಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಸಭೆಯ ಬಗ್ಗೆ ಕೆಲವು ಪತ್ರಿಕೆಗಳು ಪ್ರಕಟವಾಗಿದೆ. ಆದರೆ ಜನರು ಸಭೆಗೆ ಬಂದಿಲ್ಲ. ಹಾಗಾಗಿ ಸಭೆಯನ್ನು ನಡೆಸುವುದಕ್ಕೆ ಅವಕಾಶ ಕೇಳಿದಾಗ, ಸಭೆಯಲ್ಲಿ ಒಪ್ಪಿಗೆ ಸಿಗದ ಕಾರಣ ಸಭೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಸದಸ್ಯರಾದ ಕೆ.ಜಿ ಸಿದ್ದೇಶ್, ದಿನೇಶ್ ಬಾಬು, ಅಶ್ವಿನಿ ಕೃಷ್ಣ, ಪಕ್ಕೀರಮ್ಮ, ನಾಗರತ್ನ, ಸುಮಿತ್ರಮ್ಮ ನಾಮನಿರ್ದೇಶನ ಸದಸ್ಯರಾದ ದಿವಾಕರ, ಸಂತೋಷ ದೊಡ್ಡಮನಿ ಇತರರು ಹಾಜರಿದ್ದರು.

## ಹರಪನಹಳ್ಳಿಯಲ್ಲಿ ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕಗಳ ವಿತರಣೆ



ಹರಪನಹಳ್ಳಿ, ಜ. 2 - ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮರು ಸಿಂಚನ ವಿದ್ಯಾರ್ಥಿ ಅಭ್ಯಾಸ ಪುಸ್ತಕಗಳನ್ನು 5, 6 ಮತ್ತು 7ನೇ ತರಗತಿಗಳಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಸಿ. ಹಾಲೇಶ್, ಉಪಾಧ್ಯಕ್ಷರು ಹಾಗೂ ಎಸ್‌ಡಿಎಂಸಿ ಸರ್ವ ಸದಸ್ಯರು, ಮುಖ್ಯ ಗುರುಗಳು, ಶಿಕ್ಷಕ-ಶಿಕ್ಷಕಿಯರು ಮತ್ತು ಅತಿಥಿ ಶಿಕ್ಷಕಿಯರು, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ಬನ್ನಿಕೋಡು ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ನಾಗರಾಜ್, ಉಪಾಧ್ಯಕ್ಷರಾಗಿ ಜಯದೇವಪ್ಪ ಆಯ್ಕೆ



ಹರಿಹರ,ಜ.2- ನಗರದ ಹೊರ ವಲಯದ ಬನ್ನಿಕೋಡು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಚ್. ಹೆಚ್. ನಾಗರಾಜ್ ಮತ್ತು ಉಪಾಧ್ಯಕ್ಷರಾಗಿ ಎಸ್. ಜಯದೇವಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘಕ್ಕೆ ಮುಂದಿನ 5 ವರ್ಷಗಳ ಅವಧಿಗೆ ಒಟ್ಟು 12 ಜನ ಸದಸ್ಯರುಗಳು ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ತಿಳಿಸಿದರು.

ಈ ಸಂದರ್ಭದಲ್ಲಿ ಹೆಚ್. ಹೆಚ್. ಬಸವರಾಜ್, ಪಿ.ವಿ. ವಾಗೀಶ್, ರಾಮನಗೌಡ, ನಟರಾಜ್ ಎಂ, ನಾಗರಾಜ್ ಎಚ್. ಪಿ.ಎಸ್, ಅಜಯ್ ಗೌಡ, ಅಂಗಡಿ ಜಯಪ್ಪ, ಮಲ್ಕಪ್ಪರ್ ನಾಗರಾಜ್, ಗೌಡ್ರು ರವೀಂದ್ರನಾಥ್ , ಎಲ್‌ಐಸಿ ಹನುಮಂತಪ್ಪ, ಮಾಗನೂರ್ ಹನುಮಂತಪ್ಪ, ಬಸಣ್ಣ, ತಳವಾರ್ ಹನುಮಂತಪ್ಪ, ಪೈಲ್ವಾನ್ ಹನುಮಂತಪ್ಪ, ಹೊಟ್ಟೆ ಗೌಡ್ರು ನಾಗಪ್ಪಜ್ಜ, ಹೊಟ್ಟೆಗೌಡ್ರು, ರಾಮನ ಗೌಡ್ರು, ಹೊಟ್ಟೆ ಗೌಡ್ರು ಸುಬಸಪ್ಪ, ಉದ್ದಾರ್ ಸುಭಾಷ್, ಹರಿಹರ ರವಿಕುಮಾರ್, ಶೋಭಾ ಪ್ರವೀಣ್ ಉದ್ದಾರ್, ಬಸವರಾಜ್, ಪ್ರಭುಗೌಡ, ಹೊಟ್ಟೆಗೌಡ್ರು ಪ್ರವೀಣ್, ತಿಪ್ಪೇಶ್, ರಂಗಪ್ಪ, ಮಹೇಶ್ ಮಲ್ಕಪ್ಪರ್, ದಂಡಿಗೆಪ್ಪ, ಬಸಪ್ಪ ಮತ್ತಿತರರು ಇದ್ದರು.

## ಉತ್ಪಾದನಾ ವಲಯದ ಬೆಳವಣಿಗೆ 12 ತಿಂಗಳಲ್ಲೇ ಅತಿ ಕಡಿಮೆ

**(1ನೇ ಪುಟದಿಂದ)** ತಿಂಗಳಲ್ಲಿ ಉತ್ಪಾದನಾ ಸೂಚ್ಯಂಕ 56.4ರಷ್ಟಿದೆ. ನವೆಂಬರ್‌ನಲ್ಲಿ ಇದು 56.5ರಷ್ಟಿತ್ತು. ಇದು ಉತ್ಪಾದನಾ ವಲಯದಲ್ಲಿ ಇಳಿಕೆಯಾಗಿರುವುದನ್ನು ತೋರಿಸುತ್ತಿದೆ

ಇಷ್ಟಾದರೂ ಡಿಸೆಂಬರ್ ತಿಂಗಳಲ್ಲಿ ಉತ್ಪಾದನಾ ಬೆಳವಣಿಗೆ ದೀರ್ಘಾವಧಿ ಸರಾಸರಿಯಾದ 54.1ಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ. ಪಿಎಂಐ ಸೂಚ್ಯಂಕ 50ಕ್ಕಿಂತ ಹೆಚ್ಚಾಗಿದ್ದಲ್ಲಿ ಅದು ವಿಸ್ತರಣೆಯನ್ನೂ ಹಾಗೂ 50ಕ್ಕಿಂತ ಕಡಿಮೆಯಿದ್ದಲ್ಲಿ ಕುಸಿತವನ್ನು ತೋರಿಸುತ್ತದೆ.

ಭಾರತದ ಉತ್ಪಾದನಾ ವಲಯ ಬೆಳವಣಿಗೆ ಕಾಣುತ್ತಿದೆಯಾದರೂ ಇದರ ವಿಸ್ತರಣೆ ಮಂದಗತಿಯಲ್ಲಿದೆ. ಕಳೆದ ಇಡೀ ವರ್ಷದಲ್ಲಿ ಉತ್ಪಾದನಾ ವಲಯದ ವಿಸ್ತರಣೆ ಕಡಿಮೆಯಾಗಿದೆ. ಮುಂದಿನ ಉತ್ಪಾದನೆಯೂ ಕಡಿಮೆಯಾಗುವ ಸೂಚನೆ ಇದೆ ಎಂದು ಹೆಚ್‌ಎಸ್‌ಬಿಸಿ ಆರ್ಥಿಕ ಪರಿಣಿತ ಐನೆಸ್ ಲ್ಯಾಮ್ ತಿಳಿಸಿದ್ದಾರೆ.

ಸ್ಪರ್ಧೆ ಹಾಗೂ ಬೆಲೆಗಳ ಒತ್ತಡದಿಂದಾಗಿ ಉತ್ಪಾದನಾ ವಲಯದ ಬೆಳವಣಿಗೆಗೆ ಹಿನ್ನಡೆಯಾಗಿದೆ. ಹೊಸ ರಫ್ತು ಆದೇಶಗಳಲ್ಲಿ ಸ್ವಲ್ಪ ಹೆಚ್ಚಳವಾಗಿದೆ ಎಂದು ಲ್ಯಾಮ್ ತಿಳಿಸಿದ್ದಾರೆ.

ನವೆಂಬರ್ ತಿಂಗಳ ನಂತರ ಕಂಟೇನರ್, ಸರಕು ಹಾಗೂ ಕಾರ್ಮಿಕ ವೆಚ್ಚಗಳು ಹೆಚ್ಚಾಗಿವೆ. ಇದು ಭಾರತೀಯ ಉತ್ಪಾದಕರಲ್ಲಿ ಒಟ್ಟಾರೆ ವೆಚ್ಚದ ಹೆಚ್ಚಳಕ್ಕೆ ಕಾರಣವಾಗಿದೆ.

## ಕನ್ನಡ ರಥಕ್ಕೆ ಶಾಸಕರಿಂದ ಚಾಲನೆ

**(1ನೇ ಪುಟದಿಂದ)** ಸಾಕ್ಷ್ಯಚಿತ್ರ ಪ್ರದರ್ಶನಗೊಳ್ಳಲಿವೆ ಎಂದರು.

ಪಟ್ಟಣದ ಅಂಬೇಡ್ಕರ್ ವೃತ್ತದ ಮೂಲಕ ದಾವಣಗೆರೆ ರಸ್ತೆ, ಮಹಾತ್ಮಗಾಂಧಿ ವೃತ್ತದ ಮೂಲಕ ವಿದ್ಯಾರ್ಥಿಗಳು, ಅಧಿಕಾರಿಗಳ ನೇತೃತ್ವದಲ್ಲಿ ಕಲಾತಂಡಗಳ ಮೂಲಕ ಅದ್ದೂರಿ ಕನ್ನಡ ರಥದ ಮೆರವಣಿಗೆ ಸಾಗಿತು. ನಂತರ ರಸ್ತೆಮಾಚಿಕೆರೆ ಮಾರ್ಗವಾಗಿ ಬಿಸ್ತುವಳ್ಳಿ, ಬಿದರಕೆರೆ, ತೋರಣಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳ ಮುಖಾಂತರ ಕಲ್ಲದೇವರಪುರ ಗ್ರಾಮಕ್ಕೆ ತೆರಳಿತು.

ಈ ಸಂದರ್ಭದಲ್ಲಿ ಸಮ್ಮೇಳನದ ಅಧ್ಯಕ್ಷರಾದ ಸಾಂಸ್ಕೃತಿಕ ಚಿಂತಕ, ಸಾಹಿತಿ ಡಾ. ಎ.ಬಿ. ರಾಮಚಂದ್ರಪ್ಪ, ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ, ಸಾಹಿತಿ ಎನ್.ಟಿ. ಎರ್ರಿಸ್ವಾಮಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎ.ಎಲ್. ತಿಪ್ಪೇಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ರವಿಚಂದ್ರ, ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ, ತಾ.ಪಂ. ಇಓ ಕೆಂಚಪ್ಪ, ಬಿಇಓ ಹಾಲಮೂರ್ತಿ, ಪಿಐ ಶ್ರೀನಿವಾಸ್ ರಾವ್, ಕಸಾಪ ತಾಲ್ಲೂಕು ಅಧ್ಯಕ್ಷೆ ಸುಜಾತಮ್ಮ, ರಥ ನಿರ್ವಹಣಾ ಸಮಿತಿ ಅಧ್ಯಕ್ಷ ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮತ್ತು ಸಮಿತಿ ಸದಸ್ಯರು ಇದ್ದರು.

# 'ವಿಶ್ವ ಸಮ್ಮೇಳನಕ್ಕೆ' ಅನುದಾನ ಕೊಡಿ



**ವಿಶ್ವ ಕನ್ನಡ ಸಮ್ಮೇಳನ ದಾವಣಗೆರೆಯಲ್ಲಿ ನಡೆಸಬೇಕೆಂದು ಸರ್ಕಾರ 2017ರಲ್ಲಿ ತೀರ್ಮಾನ ಕೈಗೊಂಡ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಂದಿನ ಮತ್ತು ಇಂದಿನ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯ ಚಿತ್ರವನ್ನು ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಪ್ರದರ್ಶಿಸಿದರು.**

**(1ನೇ ಪುಟದಿಂದ)** ನಾವು ಮೊದಲು ಜಿಲ್ಲಾ ಉಸ್ತುವಾರಿ ಸಚಿವರ ಮನವೊಲಿಸುವ ಕಾರ್ಯ ಮಾಡಿದಾಗ, ಖುದ್ದು ನಮ್ಮ ಮಂತ್ರಿಗಳೇ ಮುಖ್ಯಮಂತ್ರಿಗಳಿಗೆ ಒತ್ತಡ ಹೇರಲಿದ್ದಾರೆ. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲರೂ ಹೋಗಿ ಸಚಿವರಿಗೆ ಮನವಿ ಸಲ್ಲಿಸೋಣ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಮಾತನಾಡಿ, ಇದು ಇಂದಿನ ಹೊಸ ಬೇಡಿಕೆಯೇನಲ್ಲ. ಇಲ್ಲಿ ಸಮ್ಮೇಳನ ನಡೆಯಬೇಕು ಎಂಬುದು ಬಹು ದಿನದ ಕನಸು ಆಗಿದೆ. ಹಾಗಾಗಿ 3ನೇ ವಿಶ್ವ ಕನ್ನಡ ಸಮ್ಮೇಳನ ದಾವಣಗೆರೆಯಲ್ಲಿಯೇ ನಡೆಯುವಂತೆ ದೊಡ್ಡ ಸಂಖ್ಯೆಯಲ್ಲಿ ಎಲ್ಲರೂ ಧ್ವನಿ ಎತ್ತೋಣ ಎಂದು ತಿಳಿಸಿದರು.

ರೈತ ಮುಖಂಡ ಬಲ್ಲೂರು ರವಿ ಕುಮಾರ್ ಮಾತನಾಡಿ, ವಿಶ್ವ ಕನ್ನಡ ಸಮ್ಮೇಳನದ ಹೋರಾಟಕ್ಕಾಗಿ ಒಂದು ಒಕ್ಕೂಟ ತೆರೆದು, ಇಲ್ಲಿನ ಎಲ್ಲ ಸಂಘಟನೆಗಳಿಂದ ಇಬ್ಬಿಬ್ಬರನ್ನು ನಿಯೋಜಿಸಿಕೊಂಡು ಎಲ್ಲರೂ ಒಗ್ಗಟ್ಟಾಗಿ, ಸಂಬಂಧಿಸಿದವರಿಗೆ ಮನವಿ ಸಲ್ಲಿಸೋಣ. ಅದಕ್ಕೆ ಸ್ಪಂದನೆ ಸಿಗದಿದ್ದರೆ ಹೋರಾಟಕ್ಕೆ ಇಳಿಯೋಣ ಎಂದು ಅಭಿಪ್ರಾಯ ತಿಳಿಸಿದರು.

ಸಾಹಿತಿ ಬಾ.ಮ. ಬಸವರಾಜಯ್ಯ ಮಾತನಾಡಿ, ಸಮ್ಮೇಳನಕ್ಕಾಗಿ ಅಂದು 5 ಕೋಟಿ ರೂ. ಬಿಡುಗಡೆಯಾಗಿ ಅದು ಅಲ್ಲಿಗೆ ಸ್ಥಬ್ದವಾಗಿದೆ. ಹಾಗಾಗಿ ನಿಂತು ಹೋದ ಆ ಪ್ರಕ್ರಿಯೆಯನ್ನು ಮುಂದುವರೆಸಬೇಕು. ಈ ನಿಟ್ಟಿನಲ್ಲಿ ಎಲ್ಲರೂ ದಿನಾಂಕ ನಿಗದಿ ಪಡಿಸುವಂತೆ ಒತ್ತಾಯಿಸಬೇಕಿದೆ ಎಂದು ಹೇಳಿದರು.

ಕಾನಿಪ ಜಿಲ್ಲಾಧ್ಯಕ್ಷ ಇ.ಎಂ ಮಂಜುನಾಥ ಮಾತನಾಡಿ, ಇಚ್ಛಾಶಕ್ತಿ ಕೊರತೆಯಿಂದಾಗಿ ಇಲ್ಲಿ ನಡೆಯುವ ಸಮ್ಮೇಳನ ತಟಸ್ಥವಾಗಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳು ಸಮ್ಮೇಳನಕ್ಕೆ ಅಡ್ಡಿಯಾಗಬಹುದು. ಆದರೆ, ಸಚಿವ ಮಲ್ಲಿಕಾರ್ಜುನ್ ಅವರ ಮೇಲೆ ಒತ್ತಡ ತಂದಾಗ ಮಾತ್ರ ಸಮ್ಮೇಳನ ನಡೆಯಲು ಸಾಧ್ಯ ಎಂದರು.

ಪತ್ರಕರ್ತ ಫಕೃದ್ದೀನ್ ಮಾತನಾಡಿ, ಸಮ್ಮೇಳನದ ದಿನಾಂಕ ನಿಗದಿ ಪಡಿಸುವಂತೆ ಮುಖ್ಯಮಂತ್ರಿಗಳಿಗೆ ಕೇಳೋಣ ಮತ್ತು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಮ್ಮ ಹಕ್ಕೊತ್ತಾಯಗಳನ್ನು ಮಂಡಿಸೋಣ ಎಂದರು.

ದಾವಣಗೆರೆಯಲ್ಲೇ 'ವಿಶ್ವ ಕನ್ನಡ ಸಮ್ಮೇಳನ' ನಡೆಯುವಂತೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಅಭಿಯಾನ ಪ್ರಾರಂಭಿಸುವ ಮೂಲಕ ಸರ್ಕಾರದ ಗಮನ ಸೆಳೆಯಬೇಕು ಎಂದು ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್ ಹೇಳಿದರು.

ದಾವಣಗೆರೆ ನಗರದಲ್ಲಿ 'ವಿಶ್ವ ಕನ್ನಡ ಸಮ್ಮೇಳನ' ನಡೆದರೆ ವಿಶ್ವಮಟ್ಟದಲ್ಲಿ ನಗರದ ಕೀರ್ತಿ ರಾರಾಜಿಸಲಿದೆ ಎಂದು ಜಿಲ್ಲಾ ಕಸಾಪ ಕೋಶಾಧ್ಯಕ್ಷ ರಾಘವೇಂದ್ರ ನಾಯರಿ ಹೇಳಿದರು.

ಈ ವೇಳೆ ಹಿರಿಯ ಪತ್ರಕರ್ತರಾದ ಸದಾನಂದ ಹೆಗಡೆ, ಮಂಜುನಾಥ್ ಗೌರಕ್ಕಳವರ್, ಕನ್ನಡ ಪರ ಹೋರಾಟಗಾರ ಬಂಕಾಪುರದ ಚನ್ನಬಸಪ್ಪ, ಸುಮತಿ ಜಯಪ್ಪ, ಜಯಮ್ಮ ನೀಲಗುಂದ, ಎಸ್.ಎಂ. ಮಲ್ಲಮ್ಮ, ಸತ್ಯಭಾಮ ಮಂಜುನಾಥ್, ರುದ್ರಾಕ್ಷಿ ಬಾಯಿ, ಹೆಚ್.ಎನ್. ಶಿವಕುಮಾರ್, ಜಿಗಳಿ ಪ್ರಕಾಶ್, ಕೆ. ಸಿರಾಜ್, ಇತರರು ಇದ್ದರು.

### ಶ್ರೀಮತಿ ರತ್ನಮ್ಮ ನಿಧನ



ದಾವಣಗೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮದ ದಿ. ಗೌಡ್ರು ವಿರೂಪಾಕ್ಷಪ್ಪ ಇವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ (62) ಇವರು ದಿನಾಂಕ : 2.1.2025 ರಂದು ಗುರುವಾರ ರಾತ್ರಿ 9 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 3.1.2025 ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಲಿಂಗದಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

### ನಿವೃತ್ತ ಮುಖ್ಯ ಶಿಕ್ಷಕ ಕೆ. ಅಂಜಿನಪ್ಪ ನಿಧನ



ದಾವಣಗೆರೆ ಸಿಟಿ ನಿಟ್ಟುವಳ್ಳಿ ವಾಸಿಗಳಾದ ಅಂಜಿನಪ್ಪ ಕೆ. ನಿವೃತ್ತ ಮುಖ್ಯ ಶಿಕ್ಷಕರು (74) ಇವರು ದಿನಾಂಕ : 02.01.2025ರ ಗುರುವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ : 03.01.2025ನೇ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಸಾರ್ವಜನಿಕ ರುದ್ರಭೂಮಿ (ಬೂದಾಳ್ ರೋಡ್) ಯಲ್ಲಿ ನೆರವೇರಲಿದೆ.

### ದಾವಣಗೆರೆ ನಗರದ ನಿರಂಜನಸ್ವಾಮಿ ನಿಧನ



ದಾವಣಗೆರೆ ನಗರದ ದುಗ್ಗಮ್ಮ ದೇವಸ್ಥಾನದ ಬಳಿ ವಾಸಿ ಆರ್.ವಿ. ನಿರಂಜನ ಸ್ವಾಮಿ (22) ಅವರು ದಿನಾಂಕ : 2.1.2025ರ ಗುರುವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ತಂದೆ : ವಿಜಯಸ್ವಾಮಿ ಮತ್ತು ತಾಯಿ : ಕವಿತಾ ಹಾಗೂ ಸಹೋದರಿ : ಗಾಯತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 3.1.2025ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಹರಿಹರ ತಾ. ಸಂಕ್ಲೀಪುರ ಗ್ರಾಮದಲ್ಲಿ ನೆರವೇರಲಿದೆ.

## ಹಳ್ಳಿಹಾಳ್ ಮಟ್ಟಿ ಕ್ಯಾಂಪ್‌ನಲ್ಲಿ ಕಳ್ಳತನ ಪ್ರಕರಣ ಪತ್ತೆ

ದಾವಣಗೆರೆ, ಜ.2- ಹರಿಹರ ತಾಲ್ಲೂಕು ಹಳ್ಳಿಹಾಳ್ ಮಟ್ಟಿ ಕ್ಯಾಂಪಿನ ಮನೆಯೊಂದರಲ್ಲಿ ಡಿಸೆಂಬರ್ 18ರಂದು ಬಾಗಿಲು ಮುರಿದು ಕಳವು ಮಾಡಿದ್ದ ಚಿನ್ನಾಭರಣ, ಹಣ ಹಾಗೂ ಗೂಡ್ಸ್ ವಾಹನವನ್ನು ಪೊಲೀಸರು ಗುರುವಾರ ಪತ್ತೆ ಮಾಡಿದ್ದಾರೆ. ಕಳವು ಮಾಡಿದ್ದ ಅದೇ ಗ್ರಾಮದ ಮಂಜುನಾಥ ಎಂಬಾತನಿಂದ 1.98 ಲಕ್ಷ ಮೌಲ್ಯದ 38 ಗ್ರಾಂ ಚಿನ್ನಾಭರಣ, 23,500 ರೂ.ನಗದು ಹಾಗೂ ಟಾಟಾ ಏಸ್ ಸರಕು ಸಾಗಣೆ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಗ್ರಾಮಾಂತರ ಡಿವೈಎಸ್ಪಿ ಬಸವರಾಜ್ ಮಾರ್ಗದರ್ಶನದಲ್ಲಿ ಸಿಪಿಐ ಸುರೇಶ್ ಸಗರಿ, ಪಿಎಸ್‌ಐ ಪ್ರಭು ಕೆಳಗಿನಮನಿ, ಎಸ್.ಬಿ. ಚಿದಾನಂದಪ್ಪ, ಎಎಸ್‌ಐ ಮಹ್ಮದ್ ಇಲ್ಯಾಸ್, ಸಿಬ್ಬಂದಿ ಫೈರೋಜ್ ಖಾನ್, ಲಕ್ಷ್ಮಣ, ವೆಂಕಟರಮಣ, ವಿನಾಯಕ, ಮಲ್ಲಿಕಾರ್ಜುನ, ವೀರೇಶ್, ಅನ್ಸರ್, ವಿಜಯ್, ಮುರುಳೀಧರ, ರಾಜಪ್ಪ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಹೆಚ್ಚುತ್ತಿರುವ ಬಡ್ಡಿ ದರ, ರಫ್ತು ಹಣಕಾಸಿನಲ್ಲಿ ಇಳಿಕೆ

**(1ನೇ ಪುಟದಿಂದ)** ಸರ್ಕಾರ ಬಡ್ಡಿ ದರ ಸಮತೋಲನ ಯೋಜನೆಯನ್ನು ಇನ್ನೂ ಮೂರು ವರ್ಷಗಳ ಕಾಲ ಮುಂದುವರೆಸಬೇಕು ಎಂದು ಬುಧಿಯಾ ಸಲಹೆ ನೀಡಿದ್ದಾರೆ. ಕಳೆದ ಡಿಸೆಂಬರ್ 31ರಂದು ಈ ಯೋಜನೆ ಅಂತ್ಯವಾಗಿತ್ತು.

ಈ ಯೋಜನೆಯನ್ನು ದೀರ್ಘಾವಧಿಗೆ ವಿಸ್ತರಿಸುವುದು ಮಹತ್ವದ ಹೆಜ್ಜೆಯಾಗಲಿದೆ. ಈ ಯೋಜನೆಯನ್ನು ಸ್ವಲ್ಪ ಅವಧಿಗೆ ಮಾತ್ರ ವಿಸ್ತರಿಸಿದರೆ ಭಾರತೀಯ ಉತ್ಪಾದಕರು ಹಿನ್ನಡೆ ಅನುಭವಿಸಲಿದ್ದಾರೆ ಎಂದವರು ಹೇಳಿದ್ದಾರೆ.

ನಗದು ಹರಿವಿಗೆ ಸಂಬಂಧಿಸಿದಂತೆ ರಫ್ತುಗಾರರು ಪ್ರಮುಖ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹೆಚ್ಚಿನ ಬಡ್ಡಿದರ ಹಾಗೂ ಕುಸಿಯುತ್ತಿರುವ ರಫ್ತು ಹಣಕಾಸು ಸಮಸ್ಯೆಗಳಿಂದಾಗಿ ಅವರ ಸ್ಪರ್ಧಾತ್ಮಕತೆ ಮೇಲೆ ಪರಿಣಾಮವಾಗುತ್ತಿದೆ ಎಂದು ಬುಧಿಯಾ ಹೇಳಿದ್ದಾರೆ. ರಫ್ತು ವಲಯಕ್ಕೆ ಸಣ್ಣ ಉದ್ಯಮಗಳ ರಫ್ತುಗಾರರು ಬೆನ್ನೆಲುಬಾಗಿದ್ದಾರೆ. ಶೇ. 3 ರಿಂದ 5ರವರೆಗೆ ಬಡ್ಡಿಯಲ್ಲಿ ಸಬ್ಸಿಡಿ ನೀಡುವುದರಿಂದ ಸಣ್ಣ ಉದ್ಯಮಿಗಳಿಗೆ ಸಾಕಷ್ಟು ನೆರವಾಗುತ್ತದೆ. ವಿಶೇಷವಾಗಿ ಚರ್ಮೋದ್ಯಮ, ಇಂಜಿನಿಯರಿಂಗ್, ಬಟ್ಟೆ ಹಾಗೂ ಆಭರಣ ವಲಯಗಳಿಗೆ ನೆರವಾಗಲಿದೆ ಎಂದವರು ಹೇಳಿದ್ದಾರೆ.

## ಡಿಪ್ಲೋಮಾ ಇನ್ ಜೋತಿಷ್ಯದಲ್ಲಿ ದಾವಣಗೆರೆಯ ಶಾರದಾ ರಾಜ್ಯಕ್ಕೆ ಪ್ರಥಮ

ದಾವಣಗೆರೆ, ಜ. 2 - ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಆಯೋಜಿಸಿದ್ದ ಡಿಪ್ಲೋಮಾ ಇನ್ ಜೋತಿಷ್ಯದಲ್ಲಿ ದಾವಣಗೆರೆ ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ವಿದ್ಯಾರ್ಥಿ ಶಾರದಾ ಡಿ. ಆರ್. 448 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಅದೇ ರೀತಿ ಎ.ಎಂ. ಸುನಂದಾ 429, ಆನಂದಯ್ಯ ಟಿ.ಎಂ. 428 ಅಂಕ ಗಳಿಸಿ ರಾಜ್ಯಕ್ಕೆ ಕ್ರಮವಾಗಿ 4 ಮತ್ತು 5 ನೇಯ ಸ್ಥಾನ ಗಳಿಸಿದ್ದಾರೆ.








ಕರಿಸಿದ್ದೇಶ್ವರ ಬಿ.ಸಿ. 420 ಹಾಗೂ ಶಾಂತಲಾ ಬಿ.ಸಿ. 415 ಅಂಕ ಗಳಿಸಿ, ಜಿಲ್ಲೆಗೆ 4 ಮತ್ತು 5 ನೇಯ ಸ್ಥಾನದಲ್ಲಿದ್ದಾರೆ.

ಕೇಂದ್ರಕ್ಕೆ ಶೇ. 100 ರಷ್ಟು ಫಲಿತಾಂಶ ಬಂದಿದೆ. 25 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 16 ಮಂದಿ ಡಿಸ್ಟಿಂಕ್ಷನ್ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಫಲಿತಾಂಶಕ್ಕೆ ಕರ್ನಾಟಕ ರಾಜ್ಯ ಜೋತಿಷ್ಯರು ಹಾಗೂ ಜೋತಿಷ್ಯ ಬೋಧನಾ ಸಂಸ್ಥೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಗಜೇಂದ್ರ, ಹರ್ಷ ವ್ಯಕ್ತಪಡಿಸಿದ್ದು, ವೈದ್ಯಕೀಯ ಜೋತಿಷ್ಯ ಹಾಗೂ ವಾಸ್ತುಶಾಸ್ತ್ರದ ಮೂಲಕ ಜೋತಿಷ್ಯವೂ ಒಂದು ವಿಜ್ಞಾನ ಎಂಬುದನ್ನು ಸಾಬೀತುಪಡಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಈ ವಿದ್ಯೆಯನ್ನು ಕಲಿಯಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ತಿಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿಯ ಅಧ್ಯಕ್ಷ ಎಂ. ಗದಿಗೆಪ್ಪಯ್ಯ, ಕಾರ್ಯ ದರ್ಶಿ ಸಿ.ಕೆ. ಆನಂದತೀರ್ಥಾಚಾರ್ ಸಂತಸ ವ್ಯಕ್ತಪಡಿಸಿದ್ದಾರೆ.

ಮುಂದಿನ ತರಗತಿಗಳಿಗೆ ಪ್ರವೇಶ ಪ್ರಾರಂಭವಾಗಿದ್ದು, ಮೊ. 9964062223 ಸಂಪರ್ಕಿಸಬಹುದೆಂದು ಪ್ರಾಂಶುಪಾಲ ಪ್ರವೀಣ್‌ಕುಮಾರ್ ಆರ್. ಬಿ. ತಿಳಿಸಿದ್ದಾರೆ.

## ಡಾ. ಎಸ್. ಶಿಶುಪಾಲರಿಗೆ ವರ್ಷದ ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿ

ದಾವಣಗೆರೆ, ಜ. 2- ಸೇವ್ ಅರ್ಥ್ - ಫೋಟೋಗ್ರಫಿ ಗುಂಪಿನಿಂದ ದಾವಣಗೆರೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಎಸ್. ಶಿಶುಪಾಲ ಅವರನ್ನು 2024ರ ವರ್ಷದ 10 ಅತ್ಯುತ್ತಮ ಛಾಯಾಗ್ರಾಹಕರಲ್ಲಿ ಒಬ್ಬರೆಂದು ಪರಿಗಣಿಸಿ ಪ್ರಶಸ್ತಿ ಪತ್ರ ನೀಡಲಾಗಿದೆ. ಇವರ ಉತ್ತಮ ಪಕ್ಷಿ ಚಿತ್ರಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗಿದೆ. ದಾವಣಗೆರೆ ಸುತ್ತಮುತ್ತ ಇರುವ ಪಕ್ಷಿಗಳನ್ನು ಶಿಶುಪಾಲ ಅವರು ತಮ್ಮ ಕ್ಯಾಮೆರಾದಲ್ಲಿ ದಾಖಲಿಸಿದ್ದಾರೆ.



# ಫಲ-ಪುಷ್ಪ ಪ್ರದರ್ಶನಕ್ಕೆ ಉತ್ತಮ ಸ್ಪಂದನೆ

### 4 ದಿನಗಳಲ್ಲಿ 20 ಸಾವಿರಕ್ಕೂ ಹೆಚ್ಚು ಜನರಿಂದ ಪ್ರದರ್ಶನ ವೀಕ್ಷಣೆ, ಜ.5 ಕೊನೆಯ ದಿನ



ದಾವಣಗೆರೆ, ಜ.2- ನಗರದ ಗಾಜಿನ ಮನೆಯಲ್ಲಿ ಕಳೆದ ಡಿ.28ರಿಂದ ಆರಂಭಗೊಂಡ ಫಲ ಪುಷ್ಪ ಪ್ರದರ್ಶನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಜನವರಿ 1ರ ಬುಧವಾರದವರೆಗೆ ಸುಮಾರು 20 ಸಾವಿರ ಜನರು ಪ್ರದರ್ಶನ ವೀಕ್ಷಿಸಿದ್ದಾರೆ. ವರ್ಷಾಂತ್ಯ ಹಾಗೂ ವರ್ಷದ ಆರಂಭದ ದಿನಗಳಾಗಿದ್ದರಿಂದ ಈ ಎರಡೂ ದಿನಗಳು ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರದರ್ಶನದ ಸವಿ ಕಂಡಿದ್ದಾರೆ.

ಕಳೆದ ನ.13ರಿಂದ 16ರವರೆಗೆ ಗಾಜಿನ ಮನೆಯಲ್ಲಿ ಚಂದ್ರಯಾನದ ಯಶಸ್ಸಿನ ಹಿನ್ನೆಲೆಯಲ್ಲಿ 25 ಅಡಿ ಎತ್ತರ ಹಾಗೂ 11 ಅಡಿ ಅಗಲದ ಪಿಎಸ್‌ಎಲ್‌ವಿ ಮಾದರಿ, 9 ಅಡಿ ಎತ್ತರದ ವಿಕ್ರಂ ಲ್ಯಾಂಡರ್ ಹಾಗೂ ಪ್ರಗ್ಯಾನ್ ರೋವರ್‌ಗಳ ಕಲಾಕೃತಿಗಳನ್ನು ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು.

ಜೊತೆಗೆ 16 ಅಡಿ ಎತ್ತರದ ಶಿವನಂದಿ, 7 ಅಡಿ ಎತ್ತರದ ಭಾರತ ಭೂಪಟ, 8 ಅಡಿ ಎತ್ತರದ ಐಸಿಸಿ ವಿಶ್ವಕಪ್ ಅನ್ನು ಹೂವುಗಳಿಂದ ರಚಿಸಲಾಗಿತ್ತು. ಈ ವೇಳೆ ಮೂರು ದಿನಗಳ ಕಾಲ ಸುಮಾರು 4 ಸಾವಿರ ಜನರು ಮಾತ್ರ ಪ್ರದರ್ಶನ ವೀಕ್ಷಿಸಿದ್ದರು. ಆದರೆ ಈ ವರ್ಷ ಇಷ್ಟೊಂದು ಸಂಖ್ಯೆಯಲ್ಲಿ ಜನ ಆಗಮಿಸಿದ್ದುದು ಇದೇ ಪ್ರಥಮ ಬಾರಿ.

ಈ ಬಾರಿ ಸೇವಂತಿಗೆ, ಗುಲಾಬಿ ಸೇರಿದಂತೆ ಐದು ವಿವಿಧ ಬಣ್ಣಗಳ ಹೂವುಗಳಿಂದ 30 ಅಡಿ ಉದ್ದ, 13 ಅಡಿ ಅಗಲದ ಹಳೇ ಸಂಸತ್ ಭವನದ ಮಾದರಿ ಆಕರ್ಷಣೀಯವಾಗಿತ್ತು.

ಕಲ್ಲಂಗಡಿ ಹಣ್ಣಿನಲ್ಲಿ ಅಂಬೇಡ್ಕರ್, ಮಹಾತ್ಮ ಗಾಂಧೀಜಿ, ಶಿವಕುಮಾರ ಸ್ವಾಮೀಜಿ, ಕನ್ನಡ ಜ್ಞಾನಪೀಠ ಪುರಸ್ಕೃತರು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಭಾವಚಿತ್ರಗಳು ಉತ್ತಮವಾಗಿದ್ದವು. ಹಾಗಲಕಾಯಿಯಲ್ಲಿ ರಚಿಸಿದ ಬೃಹತ್ ಗಾತ್ರದ ಡೈನೋಸಾರ್, ವಿವಿಧ ತರಕಾರಿಗಳಲ್ಲಿ ರಚಿಸಿದ ನವಿಲು, ತಬಲಾ, ತಂಬೂರಿ, ಪೆಂಗ್ವಿನ್ ಪಕ್ಷಿ, ನುಗ್ಗೆಕಾಯಿಯ ಮನೆ, ಕಲ್ಲಂಗಡಿ ಹಾಗೂ ಸಿಹಿಕುಂಬಳದಲ್ಲಿ ಮಾಡಿದ ಶಿವಲಿಂಗ ನೋಡುಗರನ್ನು ಆಕರ್ಷಿಸಿದವು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಚರಿತ್ರೆ ಸಾರುವ ಗ್ಯಾಲರಿಯನ್ನು ಪ್ರದರ್ಶಿಸಲಾಗುತ್ತಿದೆ. ಇದರಲ್ಲಿ ಅಂಬೇಡ್ಕರ್ ಅವರು ಬೆಳೆದು ಬಂದ ಹಾದಿ, ಅವರ ಕುಟುಂಬ, ವ್ಯಾಸಂಗದ ಮಾಹಿತಿ ಇದೆ. ಇದರ ಜೊತೆಗೆ ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರ ಪುತ್ಥಳಿಗಳನ್ನು ನಿರ್ಮಿಸಲಾಗಿದೆ. ಈ ಎಲ್ಲಾ ಕಲಾಕೃತಿಗಳ ಮುಂದೆ ಸಾರ್ವಜನಿಕರು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂತಸ ಪಡುತ್ತಿದ್ದಾರೆ.

ಇನ್ನು ಈ ಬಾರಿ ಕೃಷಿ ಇಲಾಖೆ ಸಹಯೋಗದಲ್ಲಿ ಬೆಲ್ಲದ ಪರಿಷೆ ಆಯೋಜಿಸಿದ್ದುದು ವಿಶೇಷವಾಗಿತ್ತು. ರಾಸಾಯನಿಕ ಮುಕ್ತ ಬೆಲ್ಲದ ಕುರಿತು ಅರಿವು ಮೂಡಿಸಲು ಹಾಗೂ ಉತ್ಪಾದಕರಿಗೆ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಆಯೋಜಿಸಲಾಗಿದ್ದ ಈ ಪರಿಷೆಯಲ್ಲಿ ಜನರು ರಾಸಾಯನಿಕ ಮುಕ್ತ ಬೆಲ್ಲ ಖರೀದಿಗೆ ಮುಗಿ ಬಿದ್ದು ಖರೀದಿಸಿದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆಗೆ ಮಾರಾಟಕ್ಕಿಟ್ಟಿದ್ದ ಬೆಲ್ಲ ಖಾಲಿಯಾಗಿತ್ತು.

ಗಾಜಿನ ಮನೆ ಪಕ್ಕದಲ್ಲಿ ಮಕ್ಕಳಿಗಾಗಿ ಜಾಯಿಂಟ್ ವ್ಹೀಲ್ ರೈಲು ಸೇರಿದಂತೆ ವಿವಿಧ ಆಟಿಕೆಗಳಿಗೆ ಅವಕಾಶವಿತ್ತಾದರೂ, ದರ ಹೆಚ್ಚಳವಾಗಿದೆ ಎಂಬ ಆರೋಪ ಪೋಷಕರಿಂದ ಕೇಳಿ ಬಂತು.

ಅಂದ ಹಾಗೆ ಮೂರು ದಿನಗಳಿಗೆ ಎಂದು ಆಯೋಜಿಸಲಾಗಿದ್ದ ಈ ಪ್ರದರ್ಶನದ ವೀಕ್ಷಣೆಯನ್ನು ರಾಜ್ಯ ಮಟ್ಟದ ಯುವ ವೇಳ ಆಯೋಜಿಸಿರುವ ಹಿನ್ನೆಲೆಯಲ್ಲಿ ಜನವರಿ 5ರವರೆಗೂ ವಿಸ್ತರಿಸಲಾಗಿದೆ. ತರಕಾರಿಯಲ್ಲಿ ರಚಿಸಿದ್ದ ಕಲಾಕೃತಿಗಳು ಬತ್ತಿವೆಯಾದರೂ, ಹೂವಿನಲ್ಲಿ ರಚಿಸಿರುವ ಕಲಾಕೃತಿಗಳನ್ನು ವೀಕ್ಷಿಸಬಹುದಾಗಿದೆ.



## ರಾಜ್ಯ ಮಟ್ಟದ ಯುವಜನೋತ್ಸವ ನಗರದಲ್ಲಿ ಇಂದು ಬೃಹತ್ ಜಾಥಾ

**ಯುವ ಸಮೂಹ ದೇಶದ ಆಸ್ತಿ, ಧನಾತ್ಮಕ ಚಿಂತನೆ ಬೆಳೆಸಲು ಮುಂದಾಗಿ ; ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ**

ದಾವಣಗೆರೆ, ಜ. 2 - ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಇದೇ ದಿನಾಂಕ 5 ಮತ್ತು 6 ರಂದು ನಗರದಲ್ಲಿ ರಾಜ್ಯ ಮಟ್ಟದ ಯುವಜನೋತ್ಸವ ಸ್ಪರ್ಧೆಗಳು ನಡೆಯಲಿದ್ದು, ಇದರ ಅಂಗವಾಗಿ ಯುವ ಜನರಲ್ಲಿ ಜಾಗೃತಿ ಮೂಡಿಸಲು ನಾಳೆ ದಿನಾಂಕ 3 ರಂದು ಯುವ ಸಮೂಹದಿಂದ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು.

ಅವರು ಸೋಮವಾರ ದೂಡಾ ಕಚೇರಿಯಲ್ಲಿ ಯುವಜನೋತ್ಸವ ಕಾರ್ಯ ಕ್ರಮದ ಅಂಗವಾಗಿ ವ್ಯಾಪಕ ಜಾಗೃತಿ ಮೂಡಿಸಲು ಸರ್ಕಾರಿ, ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲ ರೊಂದಿಗೆ ಏರ್ಪಡಿಸಲಾದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯುವಜನೋತ್ಸವ ಸಾಂಸ್ಕೃತಿಕ ಹಬ್ಬ, ಯುವ ಜನತೆ ದೇಶದ ಆಸ್ತಿಯಾಗಿದ್ದು ಯುವಕ, ಯುವತಿಯರಲ್ಲಿ ಧನಾತ್ಮಕ ಚಿಂತನೆಗಳನ್ನು ಬಿತ್ತಬೇಕಿದೆ. ಸಕಾರಾತ್ಮಕ ಚಿಂತನೆಗಳು ಯುವಜನೋತ್ಸವಗಳಿಂದ ಮೂಡಿ ಬರಲಿದ್ದು ಯುವ ಜನತೆಯನ್ನು ಇದರಲ್ಲಿ ತೊಡಗಿಸುವಂತೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪದವಿ ಪೂರ್ವ ಕಾಲೇಜುಗಳ ಪಾತ್ರ ಬಹಳ ಪ್ರಮುಖವಾಗಿದೆ ಎಂದರು.

ನಾಳೆ ಶುಕ್ರವಾರ ಬೆಳಗ್ಗೆ 8 ರಿಂದ ಗುಂಡಿ ವೃತ್ತದ ಬಳಿಯಿಂದ ಜಾಥಾ ನಡೆಯಲಿದ್ದು, ಪ್ರತಿಯೊಂದು ಕಾಲೇಜಿನಿಂದ ಕನಿಷ್ಠ 100ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಇದರಲ್ಲಿ ಭಾಗಿಯಾಗುವಂತೆ ಮಾಡಬೇಕಾಗಿದೆ. ಜೊತೆಗೆ ಒಂದೊಂದು ಕಾಲೇಜಿನಿಂದ ಪ್ರತ್ಯೇಕವಾಗಿ ವಿಷಯಾಧಾರಿತವಾಗಿ ಘೋಷ ವಾಕ್ಯಗಳ ಫಲಕಗಳನ್ನು ಸಿದ್ದಪಡಿಸಿಕೊಂಡು ಜಾಥಾದಲ್ಲಿ ಭಾಗವಹಿಸಲು ಮತ್ತು ವಿಶೇಷ ವೇಷ-ಭೂಷಣದಲ್ಲಿಯೂ ವಿದ್ಯಾಥಿಗಳು ಭಾಗವಹಿಸಬಹುದಾಗಿದೆ ಎಂದು ತಿಳಿಸಿದರು.

**ಜಾಥಾ ಮಾರ್ಗ**; ಗುಂಡಿ ವೃತ್ತದಿಂದ ವಿದ್ಯಾರ್ಥಿ ಭವನ, ಅಂಬೇಡ್ಕರ್ ವೃತ್ತ, ಜಯದೇವ ವೃತ್ತ, ಪಾಲಿಕೆ ಮುಂಭಾಗದಿಂದ ಎವಿಕೆ ಕಾಲೇಜು ರಸ್ತೆ ಮೂಲಕ ಮೋತಿ ವೀರಪ್ಪ ಕಾಲೇಜಿನ ವರೆಗೆ ಆಗಮಿಸಿ ಮುಕ್ತಾಯವಾಗಲಿದೆ. ಆಯಾ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ಹೋಗುವ ಜವಾಬ್ದಾರಿ ನಿರ್ವಹಿಸಬೇಕೆಂದರು.

ಈ ವೇಳೆ ದೂಡಾ ಆಯುಕ್ತ ಹಾಗೂ ಪ್ರಚಾರ ಸಮಿತಿ ಅಧ್ಯಕ್ಷ ಹುಲ್ಲುಮನಿ ತಿಮ್ಮಣ್ಣ, ಸಹಕಾರ ಸಂಘಗಳ ಉಪನಿಬಂಧಕ ಮಧು ಶ್ರೀನಿವಾಸ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಯುವ ಪ್ರಶಸ್ತಿ ಪುರಸ್ಕೃತರಾದ ಮಾಗಾನಹಳ್ಳಿ ಮಂಜುನಾಥ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು, ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಭಾಗವಹಿಸಿದ್ದರು.

## ಎಲೆಬೇತೂರಿನಲ್ಲಿ ಇಂದು - ನಾಳೆ ತರಳಬಾಳು ಸಿರಿ ಸಂಭ್ರಮ

ಎಲೆಬೇತೂರು ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ, ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿ ಸಂಘದ ಸಮಾರೋಪ ಮತ್ತು ತರಳಬಾಳು ಸಿರಿ ಸಂಭ್ರಮವು ಇಂದು ಮತ್ತು ನಾಳೆ ಎಲೆಬೇತೂರು ಶಾಲಾ ಆವರಣದಲ್ಲಿ ನಡೆಯಲಿದೆ.

ಇಂದು ಬೆಳಿಗ್ಗೆ 10.30 ರಿಂದ ನಡೆಯುವ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಎಸ್.ಎಂ. ಮರುಳಸಿದ್ದಪ್ಪ ಉದ್ಘಾಟಿಸಲಿದ್ದಾರೆ.

ಮಧ್ಯಾಹ್ನ 2.30ರಿಂದ ನಡೆಯುವ ಬಹುಮಾನ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೆಚ್. ಬಸವರಾಜಪ್ಪ ವಹಿಸಲಿದ್ದು, ನಾರದಮುನಿ ಗೌಡ್ರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ನಾಳೆ ದಿನಾಂಕ 4ರ ಶನಿವಾರ 5 ಗಂಟೆಯಿಂದ ಶಾಲಾ ವಾರ್ಷಿಕೋತ್ಸವ ಮತ್ತು ತರಳಬಾಳು ಸಿರಿ ಸಂಭ್ರಮ ಕಾರ್ಯಕ್ರಮ ನಡೆಯಲಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ. ಬಸವರಾಜಪ್ಪ ವಹಿಸಲಿದ್ದಾರೆ.

ಕೆ.ಜಿ. ಶೇಖರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹೆಚ್.ಕೆ. ಲಿಂಗರಾಜು ಸಮಾರೋಪ ನುಡಿಗಳನ್ನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹೆಚ್.ಆರ್. ಶೇರ್ ಅಲಿ, ಕೆ.ಎಂ. ರೇವಣಸಿದ್ದಪ್ಪ, ಮರಿಕುಂಟೆ ನಾಗಪ್ಪ, ಬಿ. ಪ್ರಭು, ಬಿ.ಜಿ. ಸಂಗನಗೌಡ್ರು, ಕೆ. ಎನ್. ಸೋಮಶೇಖರಪ್ಪ, ಟಿ. ರಾಜಣ್ಣ, ಶ್ರೀಮತಿ ಸುಮ ಬಿ.ಎಸ್. ಸತೀಶ್ ಉಪಸ್ಥಿತರಿರುವರು.

ಭಾವಪೂರ್ಣ ಶ್ರದ್ಧಾಂಜಲಿ



ಅಧ್ಯಕ್ಷರು, ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್
ಶ್ರೀ ಕೆ. ಚಂದ್ರಗೌಡ್ರು
ಜನನ : 01.07.1958 - ನಿಧನ : 02.01.2025
ಇವರು ದಿನಾಂಕ : 02.01.2025 ರಂದು ನಿಧನರಾಗಿದ್ದು,
ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಉಪಾಧ್ಯಕ್ಷರು, ನಿರ್ದೇಶಕರುಗಳು ಮತ್ತು ಸಿಬ್ಬಂದಿ ವರ್ಗ
ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ಹರಪನಹಳ್ಳಿ.

ಚುನಾವಣಾಧಿಕಾರಿಗಳು, ದಿ ತುಂಗಭದ್ರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಹರಿಹರ. ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಹರಿಹರ ತಾ||, ದಾವಣಗೆರೆ ಜಿಲ್ಲೆ

ನಮೂನೆ-XII ಚುನಾವಣಾ ಸೂಚನೆ

ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು ದಾವಣಗೆರೆ ಜಿಲ್ಲಾ, ದಾವಣಗೆರೆ ಇವರ ಕಛೇರಿ ಆದೇಶ ಸಂಖ್ಯೆ ಡಿಆರ್/ಡಿವಿಜಿ/ಚುನಾವಣೆ/ರಿಆನೇ/ಆಮಂಸಾಚು/ಸಿಆರ್-31/2024-2025 ದಿನಾಂಕ : 27.09.2024ರ ಅನ್ವಯ ದಿ. ತುಂಗಭದ್ರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಹರಿಹರ ಈ ಸಂಘದ ದಿನಾಂಕ : 18.01.2025ರಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಯನ್ನು ಎ.ಪಿ.ಎಂ.ಸಿ. ಆವರಣ, ಹರಿಹರ ಇಲ್ಲಿ ದಿನಾಂಕ : 18.01.2025ರ ಶನಿವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿದ್ದು, ಸಂಘದ ನಿರ್ದೇಶಕರುಗಳ ಆಯ್ಕೆಗಾಗಿ ನಡೆಯಲಿರುವ ಚುನಾವಣಾ ವೇಳಾಪಟ್ಟಿ.

ಚುನಾವಣಾ ವೇಳಾಪಟ್ಟಿ

ಚುನಾಯಿಸತಕ್ಕ ಆಡಳಿತ ಮಂಡಲಿ ನಿರ್ದೇಶಕರುಗಳು ಒಟ್ಟು 13 ಸ್ಥಾನಗಳು
ಈ ಪೈಕಿ : ಸಾಮಾನ್ಯ -07, ಪರಿಶಿಷ್ಟ ಜಾತಿ-1, ಪರಿಶಿಷ್ಟ ಪಂಗಡ-01, ಹಿಂದುಳಿದ ಪ್ರವರ್ಗ ಎ-01
ಹಿಂದುಳಿದ ಪ್ರವರ್ಗ ಬಿ-01 ಮಹಿಳೆಯರಿಗೆ-02 ಸ್ಥಾನಗಳು.

| ಕ್ರ.ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ, ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 01 | ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ : | ದಿ.:03.01.2025ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00ರ ವರೆಗೆ. | 14(ಎ) | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಗೆ |
| 02 | ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ | ದಿ.: 10.01.2025ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00ರ ವರೆಗೆ. | 14(ಎ) | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಗೆ |
| 03 | ಚುನಾವಣಾಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ | ದಿ. : 11.01.2025ನೇ ಶನಿವಾರ ಬೆಳಿಗ್ಗೆ 11.00 ರಿಂದ | 14(ಎ) | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿ/ ಸಹಾಯಕ ಚುನಾವಣಾಧಿಕಾರಿಗಳಿಂದ |
| 04 | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ನಾಮ ನಿರ್ದೇಶನಗೊಂಡ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿ. : 11.01.2025ನೇ ಶನಿವಾರ ನಾಮಪತ್ರಗಳ ಪರಿಶೀಲನೆ ನಂತರ | 14 ಬಿ(4) | ಸಂಘದ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 05 | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ನಾಮ ಪತ್ರವನ್ನು ವಾಪಸ್ ಪಡೆಯಲು ಕೊನೆಯ ದಿನಾಂಕ | ದಿನಾಂಕ : 12.01.2025ನೇ ಭಾನುವಾರ ಮಧ್ಯಾಹ್ನ 3.00 ಗಂಟೆಯೊಳಗೆ | 14 (ಸಿ) | ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಗಳಿಗೆ |
| 06 | ಚುನಾವಣಾಧಿಕಾರಿಗಳಿಂದ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿ. : 12.01.2025ನೇ ಭಾನುವಾರ ಮಧ್ಯಾಹ್ನ 3.00 ಗಂಟೆಯ ನಂತರ | 14(ಡಿ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 07 | ಚುನಾವಣಾಧಿಕಾರಿಗಳಿಂದ (ಅವಶ್ಯವಿದ್ದಲ್ಲಿ) ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು. | ದಿ. : 12.01.2025ನೇ ಭಾನುವಾರ ಮಧ್ಯಾಹ್ನ 4.30 ಗಂಟೆಗೆ | 14(ಇ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 08 | ಸ್ಪರ್ಧಿಸುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು. | ದಿ.: 13.01.2025ನೇ ಸೋಮವಾರ ಮಧ್ಯಾಹ್ನ 4.30 ಗಂಟೆಯ ನಂತರ | 14(ಇ) &ಎಫ್) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ಚುನಾವಣಾಧಿಕಾರಿಗಳಿಂದ |
| 09 | ಮತದಾನದ ದಿನಾಂಕ ಮತ್ತು ಸಮಯ | ದಿ.: 18.01.2025ನೇ ಶನಿವಾರ ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 4.00ರ ವರೆಗೆ | 14(ಜಿ) | ಎ.ಪಿ.ಎಂ.,ಸಿ. ಆವರಣ, ಹರಿಹರ ಇಲ್ಲಿ ಚುನಾವಣಾಧಿಕಾರಿಗಳಿಂದ ಹಾಗೂ ನೇಮಕಗೊಂಡ ಸಿಬ್ಬಂದಿಯವರಿಂದ |
| 10 | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿ. : 18.01.2025ನೇ ಶನಿವಾರ ಮತದಾನ ಮುಗಿದ ನಂತರ | 14(ಹೆಚ್) | ಎ.ಪಿ.ಎಂ.,ಸಿ. ಆವರಣ, ಹರಿಹರ ಇಲ್ಲಿ ಚುನಾವಣಾಧಿಕಾರಿಗಳಿಂದ ಹಾಗೂ ನೇಮಕಗೊಂಡ ಸಿಬ್ಬಂದಿಯವರಿಂದ |
| 11 | ಚುನಾವಣಾಧಿಕಾರಿಗಳಿಂದ ಚುನಾವಣೆ ಫಲಿತಾಂಶ ಘೋಷಣೆ | ದಿನಾಂಕ : 18.01.2025ನೇ ಶನಿವಾರ ಮತ ಎಣಿಕೆ ಮುಗಿದ ನಂತರ | 14(ಐ) | ಎ.ಪಿ.ಎಂ.,ಸಿ. ಆವರಣ, ಹರಿಹರ ಇಲ್ಲಿ ಚುನಾವಣಾಧಿಕಾರಿಗಳಿಂದ |

ಸಹಿ/- (ಹೆಚ್. ಸುನೀತ), ಚುನಾವಣಾಧಿಕಾರಿ
ದಿ ತುಂಗಭದ್ರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಹರಿಹರ.
ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ
ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ ತಾಲ್ಲೂಕು, ಹರಿಹರ.

ಸ್ಥಳ : ಹರಿಹರ
ದಿನಾಂಕ : 31.12.2024



## ದಾವಣಗೆರೆ ಹಳೆ ಕಾಲದ ಕ್ಯಾಲೆಂಡರ್ ಸ್ವಾರಸ್ಯಗಳು...

# ಇಟ್ಟುಕೊಳ್ಳಲು ಭಯವಾಯ್ತು, ಪರಿಣಾಮ ಸುಖವಾಯ್ತು !!

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ಕ್ಯಾಲೆಂಡರ್ ಅಂದಾಕ್ಷಣ ಎಲ್ಲರಿಗೂ ಕಣ್ಣೆದುರು ಬರುವುದು ಗೋಡೆ ಕ್ಯಾಲೆಂಡರ್ ಅಂದರೆ ವಾಲ್ ಕ್ಯಾಲೆಂಡರ್. ಆದರೆ, ಕ್ಯಾಲೆಂಡರ್ ಎಂಬುದರ ಅರ್ಥ 'ದಿನವಹಿ ಪಂಚಾಂಗ' ಪಂಚಾಂಗವೆಂದರೆ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಈ ಐದು ಅಂಗಗಳು.

ಪ್ರಪಂಚದಲ್ಲಿ ಲೋಹ ಯುಗದ ಪೂರ್ವದಲ್ಲೇ ಕ್ಯಾಲೆಂಡರ್ ಪರಿಕಲ್ಪನೆ ಇತ್ತೆಂದು ತಿಳಿದು ಬರುತ್ತಾದರೂ ಸಹ ಭಾರತದಲ್ಲಿ ಇದಕ್ಕಿಂತ ಪೂರ್ವದಲ್ಲೇ ಕ್ಯಾಲೆಂಡರ್ ಬಳಕೆಯಲ್ಲಿತ್ತು ಎಂಬುದು ಗೊತ್ತಾಗುತ್ತದೆ. ಜುಲಿಯನ್ ಕ್ಯಾಲೆಂಡರ್ ಕ್ರಿಸ್ತಪೂರ್ವ 14 ನೇ ಶತಮಾನದಲ್ಲಿ ಇತ್ತಾದರೂ ಅದಕ್ಕಿಂತ ಪೂರ್ವದಲ್ಲಿ ಕ್ರಿಸ್ತಪೂರ್ವ 57ನೇ ಶತಮಾನದಲ್ಲಿ ಭಾರತದಲ್ಲಿ ಉಜ್ಜಯಿನಿಯ ರಾಜ ವಿಕ್ರಮಾದಿತ್ಯ ವಿಕ್ರಮ ಶಕೆಯ ಪಂಚಾಂಗ ಅಂದರೆ ಕ್ಯಾಲೆಂಡರ್ ಮಾಡಿದ್ದು ತಿಳಿದು ಬರುತ್ತದೆ.

ಬೆಬಿಲೋನಿಯಾ, ಈಜಿಪ್ಟ್, ರೋಮನ್, ಪರ್ಷಿಯನ್, ಗ್ರೀಸ್, ಜುರಾಸ್ಟ್ರಿಯನ್, ಹೀಬ್ರು, ಗ್ರೆಗೋರಿಯನ್ ಕ್ಯಾಲೆಂಡರ್‌ಗಳೆಲ್ಲಾ ನಂತರ ಬಂದವು. ದಶಕಗಳ ಹಿಂದೆ ದಾವಣಗೆರೆಯಲ್ಲೂ ಅನೇಕರು ವಾಲ್ ಕ್ಯಾಲೆಂಡರ್ ಮಾಡಿಸಿಕೊಡುತ್ತಿದ್ದರಾದರೂ ದಾವಣಗೆರೆ ಕಾಟನ್ ಮಿಲ್‌ನವರ ಕ್ಯಾಲೆಂಡರ್ ಮಾತ್ರ ಅತ್ಯಂತ ಜನಪ್ರಿಯವೂ ಸುಂದರವೂ ಅಷ್ಟೇ ಬೇಡಿಕೆ ಉಳ್ಳದ್ದೂ ಆಗಿತ್ತು.

ಸಾಮಾನ್ಯವಾಗಿ ರಾಮಾಯಣ ಮಹಾಭಾರತಾದಿಗಳ ಪ್ರಮುಖ ಸನ್ನಿವೇಶಗಳನ್ನು ಆಯ್ದು ಕಲಾಕೃತಿಗಳನ್ನು ರಚಿಸಿದ ಕ್ಯಾಲೆಂಡರ್ ಇದಾಗಿರುತ್ತಿತ್ತು. ಬೇರೆಲ್ಲಾ ಕ್ಯಾಲೆಂಡರ್‌ಗಳು ಒಂದೇ ಹಾಳೆಯದಾದರೆ, ದಾವಣಗೆರೆ ಕಾಟನ್ ಮಿಲ್ ನವರ ಕ್ಯಾಲೆಂಡರ್ 12 ತಿಂಗಳಿಗೆ 12 ಕಲಾಕೃತಿಗಳ ಹನ್ನೆರಡು ಪುಟಗಳ ಕ್ಯಾಲೆಂಡರ್ ಆಗಿರುತ್ತಿತ್ತು. ಸುಪ್ರಸಿದ್ಧ ಕಲಾವಿದರುಗಳಾದ ಎಸ್.ಎಂ.ಪಂಡಿತ್, ಎಂಟೀವಿ ಆಚಾರ್ಯ, ಮೂರ್ತಿ ಮುಂತಾದವರು ಅದ್ಭುತ ಕಲಾಕೃತಿಗಳನ್ನು ಇದಕ್ಕಾಗಿ ರಚಿಸಿ ಕೊಡುತ್ತಿದ್ದರು. ನಿಯಮಿತ ಸಂಖ್ಯೆಯಲ್ಲಿ ಕ್ಯಾಲೆಂಡರ್‌ಗಳನ್ನು ಶಿವಕಾಶಿಯಿಂದ ಮಾಡಿಸಿ ತಂದು ಆದ್ಯತೆಯ ಮೇಲೆ ಕೆಲವು ಗಣ್ಯರಿಗೆ ಹಾಗೂ ಷೇರುದಾರರಿಗೆ ಮಾತ್ರ ಕೊಡಲಾಗುತ್ತಿತ್ತು.

ಕಾಟನ್ ಮಿಲ್‌ನವರ ಈ ಒಂದು ಕ್ಯಾಲೆಂಡರ್ ಅನ್ನು ಹೇಗಾದರೂ ಪಡೆಯಬೇಕೆಂದು ಅನೇಕರು ಪ್ರಭಾವ ಸಹ ಬೀರುತ್ತಿದ್ದರು. ಅನೇಕರು ವರ್ಷ ಪೂರೈಸಿದ ಮೇಲೆ ಹಳೆ ಕ್ಯಾಲೆಂಡರ್ ಅನ್ನು ಆಚೆ ಹಾಕದೆ ಚಿತ್ರಗಳಿಗೆ ಫ್ರೇಮ್ ಹಾಕಿಸಿ ಕಲಾಕೃತಿಯಂತೆ ಮನೆಯಲ್ಲಿ ಇಟ್ಟುಕೊಂಡ ಉದಾಹರಣೆಗಳೂ ಇವೆ.

ಈ ಸರಣಿಯಲ್ಲಿ ಒಮ್ಮೆ ಮಹಾಭಾರತದ ಕ್ಯಾಲೆಂಡರ್ ತುಂಬಾ ಚೆನ್ನಾಗಿ ಬಂದಿತ್ತು. ದಾವಣಗೆರೆ ಹಳೆಪೇಟೆಯ ರಾಜಶೇಖರ್ ರವರಿಗೂ ಈ ಒಂದು ಕ್ಯಾಲೆಂಡರ್ ಲಭ್ಯವಾಯಿತು.

ಆದರೆ, ಮಹಾಭಾರತದ ಕ್ಯಾಲೆಂಡರ್ ಅನ್ನು ಮನೆಯಲ್ಲಿ ಇಟ್ಟುಕೊಂಡರೆ ಜಗಳವಾಗುತ್ತದೆ ಎಂದು ಯಾರೋ ಹೇಳಿದ್ದರಿಂದ ಆ ಕ್ಯಾಲೆಂಡರ್ ಅನ್ನು ಚಾಮರಾಜಪೇಟೆಯ ಭಾಸ್ಕರ್‌ರವರಿಗೆ ಕೊಟ್ಟರು. 'ಮಹಾಭಾರತದ ಕ್ಯಾಲೆಂಡರನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು, ಜಗಳವಾಗುತ್ತೆ ಎನ್ನುತ್ತಾರಲ್ಲ?" ಎಂದು ಭಾಸ್ಕರ್ ರವರು ಹನುಮಂತರಾವ್ ಮೇಷ್ಟ್ರು ಬಳಿ ಕೇಳಿದರು. "ಅದೆಲ್ಲ ತಪ್ಪು ಕಲ್ಪನೆ, ಕಿಂಚಿತ್ತೂ ಭಯ ಬೇಡ, ಧಾರಾಳವಾಗಿ ಇಟ್ಟುಕೊಳ್ಳಿ, ನಿಮಗೆ ಅಷ್ಟೊಂದು ಭಯವಿದ್ದರೆ ನನಗೆ ಕೊಡಿ" ಎಂದು ಮೇಷ್ಟ್ರು ಅವರಿಗೆ ಹೇಳಿದರು.

ಈ ಮಾತಿನಿಂದ ಧೈರ್ಯಗೊಂಡ ಭಾಸ್ಕರ್ ಮಹಾಭಾರತದ ಆ ಕ್ಯಾಲೆಂಡರನ್ನು ಮನೆಯಲ್ಲಿ ಅಲಂಕರಿಸಿದರು. ಸ್ವಾರಸ್ಯವೆಂದರೆ ಕೆಲಸ ಸಮಯದ ನಂತರ ತಿಳಿದು ಬಂದಿತು ಭಾಸ್ಕರರ ಮನೆಯಲ್ಲಿ ಅಣ್ಣ ತಮ್ಮಂದಿರ ನಡುವೆ ಇದ್ದ ವ್ಯಾಜ್ಯವೂ ಈ ಕ್ಯಾಲೆಂಡರನ್ನು ಮನೆಗೆ ತಂದ ಮೇಲೆ ಸೌಹಾರ್ದವಾಗಿ ಬಗೆಹರಿಯಿತಂತೆ!!.

# ಸ್ನೇಹಿತೆಯನ್ನು ಮದುವೆಯಾಗಲು ಪಾಕ್‌ಗೆ ತೆರಳಿ ಜೈಲು ಪಾಲು

**(1ನೇ ಪುಟದಿಂದ)** ಈತನನ್ನು ಮದುವೆಯಾಗಲು ಬಯಸುವುದಿಲ್ಲ ಎಂದು ತಿಳಿಸಿದ್ದಾರೆ.

ಕಳೆದ ಎರಡೂವರೆ ವರ್ಷಗಳಿಂದ ಬಾಬು ಜೊತೆ ಸ್ನೇಹವಿತ್ತು. ಆದರೆ ಮದುವೆಯಲ್ಲಿ ಆಸಕ್ತಿ ಇಲ್ಲ ಎಂದು ಮಹಿಳೆ ತಿಳಿಸಿರುವುದಾಗಿ ಪಾಕಿಸ್ತಾನದ ಪಂಜಾಬ್ ಪೊಲೀಸ್ ಅಧಿಕಾರಿ ನಾಸಿರ್ ಶಾ ತಿಳಿಸಿದ್ದಾರೆ. ಅಕ್ರಮವಾಗಿ ಗಡಿ ದಾಟಿದ ಬಾಬು, ಮಂಡಿ ಬಹುದ್ದೀನ್ ಜಿಲ್ಲೆಯ ಮೌಂಗ್ ಎಂಬ ಹಳ್ಳಿಯಲ್ಲಿರುವ ಸನಾ ರಾಣಿ ಭೇಟಿ ಮಾಡಿದ್ದ. ಅಲ್ಲಿ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ಈ ಸಂಬಂಧದ ಕುರಿತು ರಾಣಿ ಹಾಗೂ ಅವರ ಕುಟುಂಬದ ಇತರೆ ಸದಸ್ಯರನ್ನು ಪೊಲೀಸರು ಪ್ರಶ್ನಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಮೂಲಕ ತಮ್ಮ ಮಗನ ಬಂಧನ ತಿಳಿದುಬಂತು ಎಂದು ಬಾಬು ತಂದೆ ಕ್ರಿಪಾಲ್ ಸಿಂಗ್ ತಿಳಿಸಿದ್ದಾರೆ.

ನನ್ನ ಮಗ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದ. ಆತ ಪಾಕಿಸ್ತಾನದ ಜೈಲಿನಲ್ಲಿದ್ದಾನೆ ಎಂದು ಕೇಳಿ ಆಘಾತವಾಗಿದೆ. ಇದೆಲ್ಲಾ ಚಲನಚಿತ್ರದಂತೆ ಕಂಡುಬರುತ್ತದೆ ಎಂದು ಸಿಂಗ್ ಹತಾಶೆ ವ್ಯಕ್ತಪಡಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಬಾಬು ಬಿಡುಗಡೆ ಮಾಡಿಸಬೇಕು ಎಂದು ಕುಟುಂಬದವರು ಮನವಿ ಮಾಡಿಕೊಂಡಿದ್ದಾರೆ.

ಕುಟುಂಬದವರು ಈ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಅದನ್ನು ವಿದೇಶಾಂಗ ಸಚಿವಾಲಯಕ್ಕೆ ಕಳಿಸಲಾಗುವುದು ಎಂದು ಅಲಿಘಡ ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಅಮೃತ ಜೈನ್ ತಿಳಿಸಿದ್ದಾರೆ.

ಬಾಬುಗೆ ಫೇಸ್‌ಬುಕ್ ಮೂಲಕ ಮಹಿಳೆಯ ಸಂಪರ್ಕವಾಗಿತ್ತು. ದೆಹಲಿಗೆ ತೆರಳುವುದಾಗಿ ಹೇಳಿ ಆತ ಅಕ್ರಮವಾಗಿ ಗಡಿ ದಾಟಿದ್ದ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

# ನಿರುದ್ಯೋಗಿ ಯುವಕರು, ಗೃಹಿಣಿಯರನ್ನು ಗುರಿಯಾಗಿಟ್ಟುಕೊಂಡು ಹೂಡಿಕೆ ಸೈಬರ್ ವಂಚನೆ

ನವದೆಹಲಿ, ಜ.2- ನಿರುದ್ಯೋಗಿ ಯುವಕರು, ಗೃಹಿಣಿಯರು, ವಿದ್ಯಾರ್ಥಿಗಳು ಹಾಗೂ ಇತರರನ್ನು ಗುರಿಯಾಗಿಟ್ಟುಕೊಂಡು ಹೂಡಿಕೆ ಹಗರಣ ನಡೆಸುತ್ತಿರುವುದು ಬೆಳಕಿಗೆ ಬಂದಿದೆ ಎಂದು ಕೇಂದ್ರ ಗೃಹ ಸಚಿವಾಲಯದ ವರದಿ ತಿಳಿಸಿದೆ.

ಆನ್‌ಲೈನ್ ಮೂಲಕ ಜನರನ್ನು ವಂಚಿಸುತ್ತಿರುವ ಸೈಬರ್ ಅಪರಾಧಿಗಳು, ಈ ಕೃತ್ಯಕ್ಕಾಗಿ ಗೂಗಲ್ ಸರ್ವೀಸಸ್ ವೇದಿಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಗಡಿಗಳನ್ನು ದಾಟಿ ಜನರನ್ನು ತಲುಪಲು ಗೂಗಲ್ ಅಡ್ವರ್‌ಟೈಸ್‌ಮೆಂಟ್ ವೇದಿಕೆ ಸೂಕ್ತವಾಗಿದೆ. ಹೀಗಾಗಿ ವಂಚಕರು ಈ ಸೇವೆಯನ್ನು ಬಳಸಿಕೊಂಡು ಜಗತ್ತಿನಾದ್ಯಂತ ವಂಚನೆ ನಡೆಸುತ್ತಿದ್ದಾರೆ. ಈ ಮೂಲಕ ಜನರನ್ನು ಅಕ್ರಮ ಹಣ ಸಾಗಣೆಯಲ್ಲಿ ತೊಡಗಿಸುತ್ತಿದ್ದಾರೆ ಹಾಗೂ ಸೈಬರ್ ಗುಲಾಮಗಿರಿಗೂ ಒಳಪಡಿಸುತ್ತಿದ್ದಾರೆ ಎಂದು ವರದಿ ತಿಳಿಸಿದೆ.

2016ರಲ್ಲಿ ಚೀನಾದಲ್ಲಿ ಹೂಡಿಕೆ ವಂಚನೆ ಹಗರಣ ಮೊದಲು ಬೆಳಕಿಗೆ ಬಂದಿತ್ತು. ವಂಚಕರು ಜನರನ್ನು ತಮ್ಮ ಜಾಲಕ್ಕೆ ಸೆಳೆದು ಸುದೀರ್ಘ ಅವಧಿಯವರೆಗೆ ಸಂಪರ್ಕದಲ್ಲಿಟ್ಟುಕೊಂಡು ವಂಚಿಸುತ್ತಿದ್ದಾರೆ. ಜನರು ಕ್ರಿಪ್ಟೋ ಕರೆನ್ಸಿ ಇಲ್ಲವೇ ಇದೇ ರೀತಿಯ ಯೋಜನೆಗಳಲ್ಲಿ ಹಣ ತೊಡಗಿಸುವಂತೆ ಮಾಡಿ ವಂಚಿಸುತ್ತಿದ್ದಾರೆ.

ಹಂದಿಗಳನ್ನು ಮಾಂಸಕ್ಕಾಗಿ ಕೊಲ್ಲುವ ಮುಂಚೆ ಅವುಗಳನ್ನು ಕೊಬ್ಬಿಸುವ ರೀತಿಯಲ್ಲೇ ಈ ಹಗರಣ ಸಹ ಜನರನ್ನು ವಿಶ್ವಾಸಕ್ಕೆ ಪಡೆದು ನಂತರ ಮೋಸ ಮಾಡಲಾಗುತ್ತಿದೆ. ಹೀಗಾಗಿ ಈ ಹಗರಣವನ್ನು 'ಕಸಾಯಿ ಹಂದಿ ಹಗರಣ' ಎಂದೂ ಬಣ್ಣಿಸಲಾಗುತ್ತಿದೆ.

ಈ ಪಿಡುಗನ್ನು ತಡೆಯಲು ಕೇಂದ್ರ ಗೃಹ ಸಚಿವಾಲಯದ ಸೈಬರ್ ಅಪರಾಧ ಸಮನ್ವಯ ಕೇಂದ್ರವು ಗೂಗಲ್ ಜೊತೆಗೂಡಿ ಕಾರ್ಯ ನಿರ್ವಹಿಸುತ್ತಿದೆ.

ಸೈಬರ್ ವಂಚಕರು ಫೇಸ್‌ಬುಕ್ ಮೂಲಕವೂ ವಂಚನೆ ನಡೆಸುತ್ತಿದ್ದಾರೆ. ಭಾರತದಲ್ಲಿ ವಾಟ್ಸಾಪ್ ಅತಿ ದೊಡ್ಡ ಸಾಮಾಜಿಕ ಜಾಲತಾಣ ವೇದಿಕೆಯಾಗಿದೆ. ಹೀಗಾಗಿ ವಂಚಕರು ಭಾರತದಲ್ಲಿ ವಾಟ್ಸಾಪ್ ಸಹ ಬಳಸುತ್ತಿರುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ.

ದೊಡ್ಡ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ವಂಚನೆ ನಡೆಸುತ್ತಿರುವ ಬಗ್ಗೆಯೂ ವರದಿಯಲ್ಲಿ ತಿಳಿಸಲಾಗಿದೆ. ಮಾರ್ಚ್ 2024ರ ವರೆಗೆ ವಾಟ್ಸಾಪ್ ಕುರಿತಂತೆ 14,746 ದೂರುಗಳು ಬಂದಿದ್ದವು. ಟೆಲಿಗ್ರಾಂಗೆ ಸಂಬಂಧಿಸಿದಂತೆ 7,651, ಇನ್‌ಸ್ಟಾಗ್ರಾಂಗೆ ಸಂಬಂಧಿಸಿದಂತೆ 7,152, ಫೇಸ್‌ಬುಕ್‌ಗೆ ಸಂಬಂಧಿಸಿದಂತೆ 7,051 ಹಾಗೂ ಯೂಟ್ಯೂಬ್‌ಗೆ ಸಂಬಂಧಿಸಿದಂತೆ 1,135 ದೂರುಗಳು ಬಂದಿವೆ.

ಸೈಬರ್ ಅಪರಾಧಗಳನ್ನು ತಡೆಯುವಲ್ಲಿ ಬೃಹತ್ ಟೆಕ್ ಕಂಪನಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಹೀಗಾಗಿ ಗೂಗಲ್ ಹಾಗೂ ಫೇಸ್‌ಬುಕ್‌ಗಳ ಜೊತೆಗೂಡಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

## ಹರಿಹರ : ವಿಶ್ವಮಾನವ ದಿನಾಚರಣೆ



ಹರಿಹರ, ಜ. 2 - ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪುರವರ ಜನ್ಮದಿನದ ಅಂಗವಾಗಿ ವಿಶ್ವಮಾನವ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು. ಶಾಸಕ ಬಿ.ಪಿ. ಹರೀಶ್ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಕಚೇರಿ ಸಿಬ್ಬಂದಿಗಳಾದ ಸಂತೋಷ್, ಉಮೇಶ್, ವಿನಾಯಕ ಆರಾಧ್ಯಮಠ ಹಾಗೂ ಇತರರು ಹಾಜರಿದ್ದರು.

## ಕಾನೂನು ಪದವೀಧರರಿಗೆ ತರಬೇತಿ ಭತ್ಯೆ

ದಾವಣಗೆರೆ, ಜ. 2 - 2024-25ನೇ ಸಾಲಿನ ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಭತ್ಯೆ ನೀಡಲು ಅರ್ಹ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ - 577006 ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು ಅಗತ್ಯ ದಾಖಲೆಗಳೊಂದಿಗೆ ಜನವರಿ 18 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

## ಹೊಳೆಸಿರಿಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಂಡೇರ ಪ್ರಭು



ಮಲೇಬೆನ್ನೂರು, ಜ.2- ಹೊಳೆಸಿರಿಗೆರೆ ಗ್ರಾ.ಪಂ ನೂತನ ಅಧ್ಯಕ್ಷರಾಗಿ ಬಂಡೇರ ಪ್ರಭು ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಿ.ಪಂ ಎಇಇ ಗಿರೀಶ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಗ್ರಾಮದ ಮುಖಂಡರಾದ ಎನ್.ಜಿ.ನಾಗನಗೌಡ್ರು, ಬಿ.ಹಾಲೇಶಪ್ಪ, ಎ.ಕೊಟ್ರಪ್ಪ ಸೇರಿದಂತೆ ಗ್ರಾ.ಪಂ ಸದಸ್ಯರು ಮತ್ತು ಪಿಡಿಒ ಜಯಕುಮಾರ್ ಹಾಗೂ ಗ್ರಾಮಸ್ಥರು ಈ ವೇಳೆ ಹಾಜರಿದ್ದು, ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

## ನಗರದಲ್ಲಿ ಅಯ್ಯಪ್ಪಸ್ವಾಮಿ ಪಡಿ ಪೂಜೆ

ವಿನೋಬನಗರ 4 ನೇ ಮೇನ್, 4 ನೇ ಮುಖ್ಯರಸ್ತೆಯಲ್ಲಿನ ಶಂಕರ್‌ನಾಗ್ ವೃತ್ತದಲ್ಲಿ ಶ್ರೀ ಅಯ್ಯಪ್ಪಸ್ವಾಮಿ ಸ್ನೇಹ ಬಳಗದ ವತಿಯಿಂದ ಇಂದು ಸಂಜೆ 5 ಕ್ಕೆ ಶ್ರೀ ಅಯ್ಯಪ್ಪಸ್ವಾಮಿ ಪೂಜೆ ಪ್ರಾರಂಭವಾಗಿ 9.30 ಗಂಟೆಗೆ ಮಹಾ ಪಡಿ ಪೂಜೆ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 5 ಗಂಟೆಯಿಂದ ಉಮಾಪತಿ ಸ್ವಾಮಿ ಮತ್ತು ಸಂಗಡಿಗರಿಂದ ಶ್ರೀ ಅಯ್ಯಪ್ಪಸ್ವಾಮಿ ಭಕ್ತಿಗೀತೆಗಳ ಕಾರ್ಯಕ್ರಮ ಸಹ ಇರುತ್ತದೆ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x43 ಎಸ್.ಎಸ್. 'ಎ' ಬ್ಲಾಕ್, ದಕ್ಷಿಣ 30x50 ಎಸ್.ಎಸ್. 'ಬಿ' ಬ್ಲಾಕ್, ಉತ್ತರ 30x45 ನಿಜಲಿಂಗಪ್ಪ ಬಡಾವಣೆ (60 ಅಡಿ ರಸ್ತೆ) ಪಶ್ಚಿಮ-ದಕ್ಷಿಣ ಕಾರ್ನರ್ 60x90
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಯುವಕರು ಬೇಕಾಗಿದ್ದಾರೆ**
ಕೃಷಿ ಉಪಕರಣಗಳನ್ನು ಮಾರಾಟ ಮಾಡಲು ಹಾಗೂ ಸರ್ವೀಸ್ ಮಾಡಲು ಅನುಭವ ಇರುವ ಯುವಕರು ಬೇಕಾಗಿದ್ದಾರೆ ಸ್ವವಿವರದೊಂದಿಗೆ ಸಂಪರ್ಕಿಸಿ.
ಹೆಚ್. ಆರ್. ಆಗ್ರೋ ಟೂಲ್
ಈರುಳ್ಳಿ ಮಾರ್ಕೆಟ್ ಹತ್ತಿರ, ದಾವಣಗೆರೆ,
93539 66351

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಜೆ.ಹೆಚ್. ಪಟೇಲ್ ನಗರ, ಸ್ಟೇಡಿಯಂ ಹತ್ತಿರ, 5ನೇ ಮೇನ್, 3ನೇ ಕ್ರಾಸ್, 'ಇ' ಬ್ಲಾಕ್‌ನಲ್ಲಿ ಪಶ್ಚಿಮಾಭಿಮುಖ, 40'x55' ಅಳತೆಯ ಖಾಲಿ ಸೈಟ್ ಮಾರಾಟಕ್ಕಿದೆ. ನಿವೇಶನ ಸಂಖ್ಯೆ 837/1
97434 30963

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ.
ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಅಡಿಕೆ ತೋಟ ಮಾರಾಟಕ್ಕಿವೆ**
NH-4 ರಸ್ತೆಯಲ್ಲಿ 5 1/2 ವರ್ಷದ ಗಿಡ, 6 1/2 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. 200 ಮೀ ಒಳಗೆ ಇವೆ. 2 ಎಕರೆ ಗದ್ದೆ ಇದೆ, ಕಲ್ಲು ಬಂಡೆ ಹತ್ತಿರ. ಬೇರೆ ಕಡೆ ಜಮೀನು ಬೇಕಾಗಿದ್ದಲ್ಲಿ ವಿಚಾರಿಸಿ.
ಏಜೆಂಟರು
81231 15137

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ದಕ್ಷಿಣ 30x35 ಸಿದ್ಧವೀರಪ್ಪ ಬಡಾವಣೆ ದಕ್ಷಿಣ 30x45 ಎಸ್.ಎಸ್. 'ಬಿ' ಬ್ಲಾಕ್, ದಕ್ಷಿಣ 30x40, ಉತ್ತರ 30x40
ಐಗೂರು ವಿಜಯಕುಮಾರ
99457 02495

**ನಂದಿನಿ ಹೋಟೆಲ್**
ಹೋಟೆಲ್‌ನಲ್ಲಿ ಕೆಲಸ ಮಾಡಲು ಮಹಿಳೆಯರು, ಚಪಾತಿ ಮಾಡಲು, ಪಾತ್ರೆ ತೊಳೆಯಲು, ಅಡುಗೆ ಮಾಡಲು ಪುರುಷ ಅಡುಗೆ ಭಟ್ಟರು ಬೇಕಾಗಿದ್ದಾರೆ. ಮತ್ತು ನಮ್ಮಲ್ಲಿ ಪ್ರತಿದಿನ ಹೋಳಿಗೆ ಸಿಗುತ್ತದೆ
ಶಕ್ತಿ ನಗರ, ಜೀನಿಯಸ್ ಸ್ಕೂಲ್ ಪಕ್ಕ, ದಾವಣಗೆರೆ.
9483532186, 8088591426

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕನಿಷ್ಠ ಓದಲು ಬರೆಯಲು ಬರುವಂತಹ ಅನುಭವುಳ್ಳ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ESI-PF ಸೌಲಭ್ಯದೊಂದಿಗೆ ವೇತನ 9000 ರಿಂದ 10,000 ಸಂಪರ್ಕಿಸಿ :
90196 77712, 73539 50027

**ಗೋಡೌನ್ ಬಾಡಿಗೆಗೆ**
4,000 ಅಡಿ + ಸ್ಟೋರೇಜ್ 2,500 ಅಡಿ ಕರೂರು ಇಂಡಸ್ಟ್ರಿಯಲ್ ಏರಿಯಾ KIADB ಗೋಡೌನ್ ಬಾಡಿಗೆಗೆ ಮತ್ತು ಹಳೆಯ ಡೈನಿಂಗ್ ಚೇರ್‌ಗಳು ಸೇಲ್‌ಗೆ ಇವೆ.
98459 77475
92421 45611

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ವಧು ಬೇಕಾಗಿದ್ದಾರೆ**
30 ವರ್ಷ ವರನಿಗೆ
ಓಂ ಗಣೇಶ ಆಪ್ಟಿಕಲ್ಸ್ ಮಾಲೀಕರು
ಇವರಿಗೆ ಮರಾಠಿ ಛತ್ರಪತಿ ಶಿವಾಜಿ ಜನಾಂಗದ ವಧು ಬೇಕಾಗಿದೆ.
ವಿನೋಬನಗರ, 1ನೇ ಮೇನ್, ದಾವಣಗೆರೆ.
95350 02847

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ ಅಥವಾ ಉತ್ತಮ ಕುಟುಂಬ (ಡ್ರೈವಿಂಗ್ ಬಲ್ಲ ಗಂಡ ಮತ್ತು ಮನೆ ಕೆಲಸದಲ್ಲಿ ಸಹಾಯ ಮಾಡಲು ಹೆಂಡತಿ) ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ. ಸಂಪರ್ಕಿಸಿ
88929 05208

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ. 40 ಸಾವಿರ ಅಡ್ವಾನ್ಸ್, ತಿಂಗಳಿಗೆ 12 ಸಾವಿರ ಬಾಡಿಗೆ
ಆಸಕ್ತರು ಸಂಪರ್ಕಿಸಿ.
98441 27137

**BOYS REQUIRED**
Rs 15000 per month
CLEANING WORK
Contact :
94488 86026
94495 80761

**CARS FOR SALE**
Alto K10 Vxi
KIA SONET GTX +
New I20 Petrol
Maruthi Celerio Automatic
Contact : Daivik Iynahalli
99456 43223

**ಕೆಲಸಕ್ಕೆ ಬೇಕಾಗಿದ್ದಾರೆ**
ಯಾವುದೇ ಡಿಗ್ರಿ ಆಗಿರುವ computer knowledge ಮತ್ತು English communication ಇರುವವರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: 95131 93031

**ಬೇಕಾಗಿದ್ದಾರೆ**
ಸೀನಿಯರ್ ಅಕೌಂಟೆಂಟ್ : ಟ್ಯಾಲಿ ಪ್ರೈಮ್, ಬಿಲ್ಲಿಂಗ್ ಹಾಗೂ ಜಿಎಸ್ ಟಿ ಫೈಲಿಂಗ್‌ನಲ್ಲಿ ಅನುಭವವುಳ್ಳವರು.
ವೇತನ ರೂ.20,000/- ದಿಂದ 25,000/-
ವಿಳಾಸ : ರಿಷಿ ಸ್ಪೈಸ್ ಇಂಡಸ್ಟ್ರೀಸ್ ಪ್ರೈ.ಲಿ., ಪಿ.ಬಿ. ರಸ್ತೆ, ದಾವಣಗೆರೆ. ಆಸಕ್ತರು ಸ್ವವಿವರವನ್ನು
87927 06279
ನಂ. ಗೆ ವ್ಯಾಟ್ಸಾಪ್ ಮಾಡಬಹುದು ಅಥವಾ info@risispice.com ಗೆ ಇಮೇಲ್ ಮಾಡಬಹುದು.

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್, ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್, ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್, ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಬೇಕಾಗಿದ್ದಾರೆ**
ಹೋಟೆಲ್‌ನ ಕೆಲಸ ಮಾಡಲು ಅನುಭವ ಇರುವ ಸಪ್ಲೇಯರ್ ಗಳು ಹಾಗೂ ಹುಡುಗರು ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುವುದು. ಉಚಿತ ಊಟ ಹಾಗೂ ವಸತಿ ಸೌಲಭ್ಯ ಇರುತ್ತದೆ
9091690966, 9945308661
98449 84431

**ಕಾರ್ನರ್ ಸೈಟ್ ಮಾರಾಟಕ್ಕಿದೆ**
ದಾವಣಗೆರೆ KHB ಜಡ್ಜ್ ಕಾಲೋನಿ ಹಿಂಭಾಗ, ಪೂರ್ವಾಭಿಮುಖವಾಗಿರುವ 30x40 ಅಳತೆ ಇರುವ ಕಾರ್ನರ್ ಸೈಟ್ ಮಾರಾಟಕ್ಕಿದೆ. ರೂ. 3000/- sqft.
ಆಸಕ್ತರು ಮಾತ್ರ ಸಂಪರ್ಕಿಸಿ :
99803 70486
96113 12996

**ಮನೆ & ಕಾರ್ನರ್ ಸೈಟ್ ಮಾರಾಟಕ್ಕಿದೆ**
1. ಸಿದ್ದವೀರಪ್ಪ ಬಡಾವಣೆ 8ನೇ ಕ್ರಾಸ್‌ನಲ್ಲಿ ಮನೆ (ರಸ್ತೆ ಕಡೆಗೆ 60ft Width x 19ft Lengh)
2. ಸರ್ಕಾರಿ ನೌಕರರ ಬಡಾವಣೆ (North-West Corner) 41x43 ಸೈಟ್ ಮಾರಾಟಕ್ಕಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
81054 25694
79755 95836

**ಮಾರಾಟಕ್ಕಿದೆ**
ದಾವಣಗೆರೆ ಮಂಡಿಪೇಟೆಯಲ್ಲಿರುವ ಕಮರ್ಷಿಯಲ್ ಕಾಂಪ್ಲೆಕ್ಸ್ ಅಳತೆ 15x115 ಅಳತೆಯಲ್ಲಿ ಗ್ರೌಂಡ್ ಫ್ಲೋರ್ ಮತ್ತು 2 ಮಹಡಿಯಲ್ಲಿ ಕಟ್ಟಡದ ಒಟ್ಟು ವಿಸ್ತೀರ್ಣ 4657.50 ಚ.ಅ. ಮಾರಾಟಕ್ಕಿದೆ. 16kw ಕರೆಂಟ್ ಲೋಡ್ ಸ್ಯಾಂಕ್ಷನ್ & ಅಂಡರ್ ಗ್ರೌಂಡ್, ಓವರ್ ಹೆಡ್ ನೀರಿನ ಟ್ಯಾಂಕ್ ಸೌಕರ್ಯವಿದೆ.
99646 92436

**For Rent**
5000 AND 16,000 SQFT Open Godown at P.B. Road, Behind sub Register office with water, Power, office room and full Compound wall.
94481 78127

**WANTED**
DISTRIBUTORS ACROSS KARNATAKA
Join Malaysia's fastest-growing MNC as a Franchise or Distributor. Don't miss this wonderful opportunity!
Age Requirement: 25+
99025 59694

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse)
ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ
ಪೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಎಲೆಕ್ಟ್ರಿಕ್ ಶಾಪ್ ಮಾರಾಟಕ್ಕಿದೆ**
ಎಲೆಕ್ಟ್ರಿಕಲ್ ಸಾಮಾನುಗಳ ಸಮೇತವಾಗಿ (ರ್‍ಯಾಕ್ + ಟೇಬಲ್‌ಗಳು) ಮಾರಾಟಕ್ಕಿವೆ.
60 ಅಡಿ ರಿಂಗ್ ರೋಡ್, ಶ್ರೀನಿವಾಸ ನಗರ, ದಾವಣಗೆರೆ ತಾ.
99165 25870, 99866 29551

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್ ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
9900971888
ಸಜ್ಜನ್ ಸೂಪರ್ ಮಾರ್ಟ್
HKR ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ

**COMPUTER OPERATOR REQUIRED FOR OFFICE WORK**
Tally prime, MS office, Kannada typing
94496 43555

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ 29.5 x70=2065 feet
ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ
74119 19668

**Science Teachers Wanted**
MSc., - 1, BSc., BEd., (CBZ)-1
(male Candidates are Preferable)
Shree Ramakrishna International School
Gutturu, Harihara.
98444 99944

**ವೃದ್ಧಾಶ್ರಮ**
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ
ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ||, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
99001 42052, 97319 93770

**ಸಾರ್ವಜನಿಕರ ಗಮನಕ್ಕೆ**

ನನ್ನ ಕಕ್ಷಿದಾರರಾದ **ಶ್ರೀಮತಿ ನಾಜೀಮಾ ಬೇಗಂ ಕೋಂ. ದಿ|| ಮಹಮ್ಮದ್ ಮಕ್ಬೂಲ್** ಹಾಗೂ ಮಕ್ಕಳಾದ **ಶ್ರೀ ದಾವೂದ್ ಅನ್ಸಾರಿ** ಹಾಗೂ **ಶ್ರೀ ಸಲ್ಮಾನ್ ಅನ್ಸಾರಿ** ಇವರುಗಳು ಷೆಡ್ಯೂಲ್ ಮನೆಯ ಬಾಬ್ತು ಮೂಲಕ ಹಕ್ಕುಳ್ಳವರಾಗಿದ್ದು, ಬಹುಕಾಲದಿಂದ ವಾಸಿಸುತ್ತಿದ್ದಾರೆ. ನಮ್ಮ ಕಕ್ಷಿಗಾರರಿಗೂ ಹಾಗೂ **ದಿ|| ಮಕ್ಬೂಲ್** ರವರ ತಾಯಿಯಾದ **ಶ್ರೀಮತಿ ಪ್ಯಾರಿ ಬೇಗಂ, ಮುಂಬೈ** ನಗರ ವಾಸಿಯಾಗಿದ್ದು, ಷೆಡ್ಯೂಲ್ ಸೊತ್ತನ್ನು ಖುದ್ದಾಗಿ ಅಥವಾ ಪವರ್ ಆಫ್ ಅಟಾರ್ನಿ ಮೂಲಕ ಮಾರಾಟ ಮಾಡಿ, ನಮ್ಮ ಕಕ್ಷಿಗಾರರನ್ನು ಷೆಡ್ಯೂಲ್ ಮನೆಯಿಂದ ಕಾನೂನು ಬಾಹಿರವಾಗಿ ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ನಮ್ಮ ಕಕ್ಷಿದಾರರ ಹಕ್ಕಿಗೆ ಚ್ಯುತಿ ಉಂಟುಮಾಡಲು ಹವಣಿಸುತ್ತಿದ್ದಾರೆ. ಕಾರಣ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ 'ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಹವಣಿಸುತ್ತಿರುವವರೇ ಎಚ್ಚರಿಕೆ' ಹಾಗೂ ಈ ಬಗ್ಗೆ ಮುಂದೆ ನಮ್ಮ ಕಕ್ಷಿಗಾರರ ಸ್ವಾಧೀನಾನುಭವಕ್ಕೆ ತೊಂದರೆ ಮಾಡಿದಲ್ಲಿ ಮುಂದಾಗುವ ಖರ್ಚು ವೆಚ್ಚಗಳಿಗೆ ನೀವೇ ಬಾಧ್ಯರಾಗುತ್ತೀರಿ.

**ಷೆಡ್ಯೂಲ್ :** ನೆರೆಕೆಯ ಮನೆ ಡೋರ್ ನಂ. 1224, 2ನೇ ಮುಖ್ಯರಸ್ತೆ, 6ನೇ ತಿರುವು, ಕೆಟಿಜೆ ನಗರ, ದಾವಣಗೆರೆ ಮತ್ತು ಇದರ ಚಕ್ಕುಬಂದಿ :
**ಪೂರ್ವಕ್ಕೆ :** ಚಮನ್ ಬಿ ಮನೆ, **ಪಶ್ಚಿಮಕ್ಕೆ :** ಶ್ರೀಧರ ನಾಯಕ್ ಮನೆ,
**ಉತ್ತರಕ್ಕೆ :** ಕನ್ಸರ್‌ವೆನ್ಸಿ ಹಾಗೂ **ದಕ್ಷಿಣಕ್ಕೆ :** ರಸ್ತೆ.

ದಿನಾಂಕ : 02-01-2025
ಸ್ಥಳ : ದಾವಣಗೆರೆ.
ಸಹಿ/- ನಾಜೀಮಾ ಬಾನು, ಒಂದನೇ ಕಕ್ಷಿದಾರಳು
ಸಹಿ/- ಜಗದೀಶ್ ಹಿರೇಮಠ, ನ್ಯಾಯವಾದಿಗಳು, ಮೊ. : 98441 88770

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ **ಶ್ರೀಮತಿ ದುರುಗಮ್ಮ ಕೋಂ ಅಣ್ಣಪ್ಪ ಹೆಚ್.** (ಮೊ.ನಂ. 96325-88215), ವಾಸ : # 842, ವಿದ್ಯಾಜ್ಯೋತಿ ಕಾನ್ವೆಂಟ್ ಶಾಲೆ ಹತ್ತಿರ, ಶ್ರೀ ರಾಜೀವ್‌ಗಾಂಧಿ ಬಡಾವಣೆ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ಪ್ರಕಟಣೆ ಏನೆಂದರೆ:-

ಮೇಲ್ಕಂಡ ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಹಿಂದಿನ ಮಾಲೀಕರಾದ ಫಕ್ರುದ್ದೀನ್ ಆಲಿ ನಥನಿ ಬಿನ್ ಹಜರತ್ ಅಲಿ ಇವರ ಹೆಸರಿಗೆ ಇದ್ದಂತಹ ನೋಂದಾಯಿತ ಅಸಲು ಕ್ರಯಪತ್ರದ **ದಿನಾಂಕ 23.09.2015ರ ಎಸ್.ಆರ್.ನಂ. 9898/2015-16ರ** ಅಸಲು ಕ್ರಯಪತ್ರವನ್ನು ನನ್ನ ಕಕ್ಷಿದಾರರು **ದಿನಾಂಕ 28.12.2024** ರಂದು ಮಧ್ಯಾಹ್ನ 01-10 ರಿಂದ 01-20 ರೊಳಗೆ ದಾವಣಗೆರೆ ನಗರದ ರಾಮ್ & ಕೋ ಸರ್ಕಲ್‌ನಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಲು ತೆಗೆದುಕೊಂಡು ಹೋದಾಗ ಆಕಸ್ಮಿಕವಾಗಿ ಮೇಲ್ಕಂಡ ಅಸಲು ಕ್ರಯಪತ್ರವು ಎಲ್ಲೋ ಬಿದ್ದು ಕಳೆದು ಹೋಗಿರುತ್ತದೆ. ಸದರಿ ಅಸಲು ಕ್ರಯಪತ್ರವನ್ನು ಸಾಕಷ್ಟು ಬಾರಿ ಹುಡುಕಿದರೂ ಸಿಗದೇ ಇರುವ ಕಾರಣ ಈ ಬಗ್ಗೆ ನನ್ನ ಕಕ್ಷಿದಾರರು ದಿನಾಂಕ 01.01.2025 ರಂದು ಆನ್‌ಲೈನ್ ಲಾಸ್ಟ್ ಆರ್ಟಿಕಲ್ ರಿಪೋರ್ಟ್ ನಂ. 1408515/2025 ರಂತೆ ದೂರು ದಾಖಲಿಸಿರುತ್ತಾರೆ. ಸದರಿ ಮೇಲ್ಕಂಡ ಅಸಲು ಕ್ರಯಪತ್ರವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ವಕೀಲರನ್ನಾಗಲೀ ಸಂಪರ್ಕಿಸಿ ಅವುಗಳನ್ನು ನನ್ನ ಕಕ್ಷಿದಾರರಿಗಾಗಲೀ ಅಥವಾ ವಕೀಲರಿಗಾಗಲೀ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ. ಸದರಿ ಸ್ವತ್ತಿನ ಬಗ್ಗೆ ಯಾರದೇ ಆಗಲಿ ತಂಟೆ - ತಕರಾರು ಅಥವಾ ಹಕ್ಕು ಹಿತಾಸಕ್ತಿ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 7 ದಿನಗಳೊಳಗಾಗಿ ಕೂಡಲೇ ಕೆಳಕಂಡ ವಕೀಲರನ್ನು ಅಥವಾ ನನ್ನ ಕಕ್ಷಿದಾರರನ್ನು ಸಂಪರ್ಕಿಸಬೇಕಾಗಿ ಈ ಮೂಲಕ ಪ್ರಕಟಿಸಲಾಗಿದೆ.

**ಷೆಡ್ಯೂಲ್ : 1) ದಾವಣಗೆರೆ ನಗರ, ರಾಜೀವ್‌ಗಾಂಧಿ ಬಡಾವಣೆಯಲ್ಲಿ ಬರತಕ್ಕ ನಿವೇಶನ ಸಂಖ್ಯೆ: 885, ಸ್ವತ್ತಿನ ಸಂಖ್ಯೆ : 21-7-682-598ರಲ್ಲಿ ವಿಸ್ತೀರ್ಣ 9.144018x6.096012 ಮೀಟರ್ = 55.74205 ಚ.ಮೀ.ವುಳ್ಳ ವಾಸೋಪಯೋಗಿ ಖಾಲಿ ನಿವೇಶನಕ್ಕೆ ಚಕ್ಕುಬಂದಿ :- ಪೂರ್ವಕ್ಕೆ: ಸೈಟ್ ನಂ.908, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸೈಟ್ ನಂ.886, ದಕ್ಷಿಣಕ್ಕೆ: ಸೈಟ್ ನಂ.884.**

ಸಹಿ/- **ಆರ್.ಟಿ. ವಿನಯ ಕುಮಾರ್,** ವಕೀಲರು, #1862/19, 4ನೇ ಮೇನ್, ಹೆಚ್.ಆರ್.ಬಿ. ನಗರ, ಸೆಂಟ್ ಜಾನ್ಸ್ ಹೈಸ್ಕೂಲ್ ಹತ್ತಿರ, ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, ದಾವಣಗೆರೆ. ಮೊ. : 9844597838. Gmil : ajjihallivinay@gmail.com

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ ಹೋಂ ಅಪ್ಲೈಯನ್ಸಸ್ ಶಾಪ್‌ಗೆ ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆದ್ಯತೆ
ಸ್ಥಳ : ಹರಿಹರ.
77603 10603
99648 75861

**Pi ACADEMY, DVG -04**
**WANTED**
Lecturers / Teachers for high School CBSE students
1. Biology (M.Sc., B.Ed) - 02
2. Chemistry (M.Sc., B.Ed) - 02
1. PM Teacher - 01
2. CBZ Teacher - 01
contact :
99642 29344

**For Rent**
1st floor, 800 sqft Office Space at P.B. Road, Near Aruna Circle, Opp. G.N. Choultry, Amaron Batteries with all Facilities
94481 78127

ನೇತ್ರದಾನ - ಶ್ರೇಷ್ಠದಾನ

**CRASH COURSE**
for Class 10 CBSE / STATE
End of March to mid of may 5 1/2 hrs of effective teaching
contact
PI ACADEMY
Sri S. Nijalingappa Layout
99642 29344

**ಕುಕ್ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ**
ವೆಜ್ & ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ.
ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
97400 98047

**ಹೋಟೆಲ್ ಕೆಲಸಕ್ಕೆ ಸ್ಟಾಫ್ ಬೇಕಾಗಿದ್ದಾರೆ**
ಕ್ಲೀನರ್ - 1, ನಾರ್ತ್ ಇಂಡಿಯನ್ ತಂದೂರಿ ಕುಕ್ - 1
ಕುಕ್ ಅಸಿಸ್ಟೆಂಟ್ - 1
ಊಟ ಹಾಗೂ ವಸತಿ ಇರುತದೆ
98459 47905

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
ಹರಿಹರದ ಟೆಂಪಲ್ ರಸ್ತೆಯಲ್ಲಿರುವ ಪ್ರಭಾಕರ್ ಟೆಕ್ಸ್‌ಟೈಲ್ಸ್ ಎದುರಿಗೆ 18x80 ಅಡಿ ಅಳತೆಯ ಲಿಫ್ಟ್ ಸೌಕರ್ಯವಿರುವ ನೆಲಮಹಡಿ, 1ನೇ ಮಹಡಿ, 2ನೇ ಮಹಡಿಯ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ಆಸಕ್ತರು ವಿಚಾರಿಸಿ
ಮೊ. : 98442 94446

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**Contact for school / college furnitures**
ಶಾಲಾ / ಕಾಲೇಜು ಪೀಠೋಪಕರಣಗಳಿಗಾಗಿ ಸಂಪರ್ಕಿಸಿ
94815 40812

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ. 1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ನೀವು ಇಷ್ಟ ಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ :
ಕೊಳ್ಳೇಗಾಲದಿಂದ ನೇರ ಪರಿಹಾರ
89716 99826

# ಮಾನವ ಸಂಪನ್ಮೂಲ ಕೊರತೆ ನೀಗಿಸಲು ಗಣಿಗಳ ಅವಶ್ಯಕತೆಯಂತೆ ಹೊಸ ಉದ್ಯೋಗಿಗಳ ನೇಮಕ



**ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯ ನೂತನ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ ಸಮಾರಂಭದಲ್ಲಿ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಇಲಾಖೆ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್**

ಬೆಂಗಳೂರು, ಜ. 2 - ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಹೆಚ್ಚಿನ ಲಾಭಾಂಶ ಗಳಿಸುವಲ್ಲಿ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆ ಮುಂಚೂಣಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿ ಇನ್ನು ಹೆಚ್ಚಿನ ಲಾಭಾಂಶಗಳನ್ನು ಗಳಿಸುವ ದೃಷ್ಟಿಯಿಂದ ಹೊಸ ಗಣಿ ಗುತ್ತಿಗೆಗಳ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸ್ಥಗಿತಗೊಂಡಿರುವ ಕೆಲವು ಗಣಿಗಳ ಪುನರ್ ಪ್ರಾರಂಭಕ್ಕೆ ಕ್ರಮವಹಿಸಲಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಇಲಾಖೆ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್ ಅವರು ತಿಳಿಸಿದರು.

ವಿಧಾನಸೌಧದ 3ನೇ ಮಹಡಿಯ ಕೊಠಡಿ ಸಂಖ್ಯೆ 305ರಲ್ಲಿ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯ 2025ನೇ ವರ್ಷದ ನೂತನ ಕ್ಯಾಲೆಂಡರ್ ಹಾಗೂ ಟೇಬಲ್ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಮಾನವ ಸಂಪನ್ಮೂಲ ಕೊರತೆಯನ್ನು ನೀಗಿಸಲು ಮತ್ತು ಪುನರ್ ಪ್ರಾರಂಭವಾಗುತ್ತಿರುವ ಗಣಿಗಳ ಅವಶ್ಯಕತೆಯಂತೆ ಹೊಸದಾಗಿ ಉದ್ಯೋಗಿ ಗಳ ನೇಮಕಕ್ಕೆ ಕ್ರಮ ವಹಿಸಿರುತ್ತದೆ ಎಂದರು.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ (KSMCL) (ಹಿಂದಿನ MML) ಒಂದು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ರಾಜ್ಯದಲ್ಲಿ ದೊರೆಯುವ ವಿವಿಧ ಅದಿರು ಮತ್ತು ಅಲಂಕಾರಿಕ ಗ್ರಾನೈಟ್ ಉತ್ಪಾದನೆ ಮತ್ತು ಮಾರಾಟದಲ್ಲಿ ತೊಡಗಿರುತ್ತದೆ.

ಸಂಸ್ಥೆಯು 2003-2004 ನೇ ಸಾಲಿನಿಂದ ಸತತವಾಗಿ ಲಾಭಾಂಶದಲ್ಲಿ ತೊಡಗಿದ್ದು 2021-22ನೇ ಸಾಲಿನಲ್ಲಿ ಅತ್ಯಧಿಕ ವಹಿವಾಟು ರೂ. 1610.00 ಕೋಟಿಗಳಾಗಿದ್ದು ತೆರಿಗೆ ನಂತರ ನಿವ್ವಳ ಲಾಭ ರೂ. 787.00 ಕೋಟಿಗಳಾಗಿರುತ್ತದೆ. ಕಳೆದ ಸಾಲಿನಲ್ಲಿ ರೂ. 1473.00 ಕೋಟಿಗಳ ವಹಿವಾಟು ಮಾಡಿರುತ್ತದೆ ಎಂದು ತಿಳಿಸಿದರು.

ಪ್ರತಿ ವರ್ಷ ತನ್ನ ಲಾಭಾಂಶದ 30% ಮೊತ್ತವನ್ನು ಹಾಗೂ ಕಳೆದ ಸಾಲಿನಿಂದ ಲಭ್ಯವಿರುವ ಹೆಚ್ಚುವರಿ ಮೊತ್ತದ ಮೇಲೆ 30% ವಿಶೇಷ ಡಿವಿಡೆಂಡ್ ಮೊತ್ತವಾಗಿ ಸರ್ಕಾರಕ್ಕೆ ಪಾವತಿ ಮಾಡಲಾಗುತ್ತಿರುತ್ತದೆ. ಅಲ್ಲದೆ ವಾರ್ಷಿಕವಾಗಿ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ರೂ. 15 ರಿಂದ ರೂ. 20.00 ಕೋಟಿ ನೀಡುತ್ತಿದ್ದು, ಲಾಭಾಂಶದಲ್ಲಿ 2% ಅನ್ನು ಸಿಎಸ್‌ಆರ್‌ಗೆ ಉಪಯೋಗಿಸಲಾಗುತ್ತಿದೆ ಎಂದರು.

ಸಂಸ್ಥೆಯು ಗಣಿ ಚಟುವಟಿಕೆಗಳ ಜೊತೆ ಇತರೆ ಚಟುವಟಿಕೆಗಳಿಗೆ ಬಂಡವಾಳ ಹೂಡಿಕೆಯಲ್ಲಿ ತೊಡಗಿದ್ದು ಇತ್ತೀಚೆಗೆ ರೇಷ್ಮೆ ಇಲಾಖೆಯ ಜೊತೆ ಜಂಟಿ ಸಹಭಾಗಿತ್ವದಲ್ಲಿ ರೂ. 666.00 ಕೋಟಿಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಮತ್ತು ಹಾಸನದಲ್ಲಿ ಸಂಸ್ಥೆಯು ಹೊಂದಿರುವ 14.00 ಎಕರೆ ಪ್ರದೇಶದಲ್ಲಿ ಸುಮಾರು ರೂ. 200.00 ಕೋಟಿ ಹೂಡಿಕೆ ಮಾಡಿ ಐಟಿ ಪಾರ್ಕ್ ನಿರ್ಮಾಣ ಮಾಡಲು ಕ್ರಮ ವಹಿಸಿರುತ್ತದೆ.

ಸಂಸ್ಥೆಯ ವಹಿವಾಟು ಮತ್ತು ಲಾಭಾಂಶಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರವು 2017-18 ನೇ ಸಾಲಿನಿಂದ ಸತತವಾಗಿ ಮುಖ್ಯಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ನೀಡುತ್ತಾ ಬಂದಿರುತ್ತದೆ. ಗಣಿಗಾರಿಕೆಯಲ್ಲಿ ಉತ್ತಮ ಪರಿಸರ ನಿರ್ವಹಣೆ ಮಾಡಿರುವ ಪ್ರಯುಕ್ತ 2023 ಮತ್ತು 2024ನೇ ಸಾಲಿನ ಪ್ರತಿಷ್ಠಿತ SKOCH Award ಪಡೆದಿರುತ್ತದೆ. ಚಾಲ್ತಿ ಸಾಲಿನ ವರ್ಷದಿಂದ ISO ಪ್ರಮಾಣ ಪತ್ರವನ್ನು ಪಡೆದಿರುತ್ತದೆ ಎಂದು ತಿಳಿಸಿದರು.

2025ನೇ ವರ್ಷದ ಈ ಸಂಸ್ಥೆಯ ನೂತನ ಡೈರಿಯನ್ನು ಕೆ.ಎಸ್.ಎಂ.ಸಿ.ಎಲ್ ಸಂಸ್ಥೆಯ ಅಧ್ಯಕ್ಷರು ಹಾಗೂ ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ್ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜಯ ವಿಭವ ಸ್ವಾಮಿ ಹಾಗೂ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಸ್. ನವೀನ್ ಕುಮಾರ್ ರಾಜು ಹಾಗೂ ಸಂಸ್ಥೆಯ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಬಂದೋಳ ಸಿದ್ದಪ್ಪ ಆಯ್ಕೆ




**ಹರಪನಹಳ್ಳಿ**

ಹರಪನಹಳ್ಳಿ, ಜ. 2 - ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲ್ಲೂಕು ಘಟಕದ ನೂತನ ಅಧ್ಯಕ್ಷರಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹರಿಯಮ್ಮನಹಳ್ಳಿಯ ಶಿಕ್ಷಕರಾದ ಬಂದೋಳ ಸಿದ್ದಪ್ಪ ಅವರು ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹುಲಿಕಟ್ಟಿಯ ಶಿಕ್ಷಕ ಟಿ. ರಾಜಕುಮಾರ ಇವರು ಆಯ್ಕೆಯಾಗಿರುತ್ತಾರೆ. ಹಿಂದೆ ಇದ್ದ ಅಧ್ಯಕ್ಷರಾಗಿದ್ದ ಬಿ. ರಾಜಶೇಖರ, ಕಾರ್ಯದರ್ಶಿ ಕೆ. ನಟರಾಜ್ ಇವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸರ್ಕಾರಿ ನೌಕರರ ಭವನದಲ್ಲಿ ನಡೆದ ಶಿಕ್ಷಕರ ಸಂಘದ ಸಭೆಯಲ್ಲಿ ಬಿ. ಸಿದ್ದಪ್ಪ ಅವರನ್ನು ಅಧ್ಯಕ್ಷರನ್ನಾಗಿ ರಾಜಕುಮಾರ ಇವರನ್ನು ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಬಿ. ಶಿವಾನಂದ ರಾಜ್ಯ ಉಪಾಧ್ಯಕ್ಷ ಬಿ. ಪದ್ಮಲತಾ ಹಾಗೂ ಶಿಕ್ಷಕರ ಸಂಘದ ಸರ್ವ ಚುನಾಯಿತ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು

## ನಕಲಿ ಕೀ ಬಳಸಿ ಕಳ್ಳತನ ; ಬಂಧನ

ದಾವಣಗೆರೆ, ಜ.2- ನಗರದ ಜಯನಗರ 'ಬಿ' ಬ್ಲಾಕ್‌ನ ಟವರ್ ಲೇಔಟ್‌ನಲ್ಲಿ ನಕಲಿ ಕೀ ಬಳಸಿ ಮನೆಯೊಂದರಲ್ಲಿ ಬಂಗಾರದ ಆಭರಣ ಹಾಗೂ ಹಣ ಕಳವು ಮಾಡಿದ್ದ ಆರೋಪಿಯೊಬ್ಬನನ್ನು ಬಂಧಿಸಿರುವ ಪೊಲೀಸರು ಆತನಿಂದ ಒಟ್ಟು 2.80 ಲಕ್ಷ ರೂ. ಮೌಲ್ಯದ ಆಭರಣ ಹಾಗೂ 30,000 ರೂ. ಹಾಗೂ ಕೃತ್ಯಕ್ಕೆ ಬಳಸಿದ್ದ ನಕಲಿ ಕೀ ವಶಪಡಿಸಿಕೊಂಡಿದ್ದಾರೆ.

ನಂದೀಶ ಬಂಧಿತ ಆರೋಪಿ. ಈತ ಅದೇ ಬಡಾವಣೆಯ ನಿವಾಸಿ ಅಜ್ಜಪ್ಪ ಎಸ್. ಅವರ ಮನೆಯಲ್ಲಿ ಈಚೆಗೆ ಯಾರೂ ಇಲ್ಲದಿದ್ದಾಗ ನಕಲಿ ಕೀ ಬಳಸಿ ಮನೆಯ ಬಾಗಿಲು ತೆರೆದು ಬೀರುವಿನಲ್ಲಿಟ್ಟಿದ್ದ 52,000 ರೂ. ಹಾಗೂ 2.80 ಲಕ್ಷ ಮೌಲ್ಯದ 20 ಗ್ರಾಂ ತೂಕದ ಬಂಗಾರದ ಸರ ಹಾಗೂ 25 ಗ್ರಾಂನ ಬಂಗಾರದ ಕೈ ಕಡಗ ಕಳವು ಮಾಡಿದ್ದ.

ಈ ಸಂಬಂಧ ಅಜ್ಜಪ್ಪ ಕೆ.ಟಿ.ಜೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಕೆ.ಟಿ.ಜೆ. ನಗರ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲ್ ಕುಮಾರ್ ಎಚ್.ಎಸ್. ಅವರ ನೇತೃತ್ವದಲ್ಲಿ ಪಿಎಸ್‌ಐ ಲತಾ ಆರ್. ಹಾಗೂ ಸಿಬ್ಬಂದಿ ಸುರೇಶ್ ಬಾಬು, ಮಹಮದ್ ರಫಿ, ಸಿದ್ದಪ್ಪ, ಗೀತಾ ಸಿ.ಕೆ. ಅವರ ತಂಡ ಆರೋಪಿ ಪತ್ತೆ ಕಾರ್ಯಾಚರಣೆ ನಡೆಸಿತ್ತು.

## ರಾಣೇಬೆನ್ನೂರು : ನೀರು ಸರಬರಾಜು ವ್ಯತ್ಯಯ

ರಾಣೇಬೆನ್ನೂರು, ಜ.2- ನಗರದ ನೀರು ಸರಬರಾಜು ಮುಖ್ಯ ಪೈಪ್ ಲೈನ್ ದುರಸ್ತಿ ಇರುವುದರಿಂದ ನಾಡಿದ್ದು ದಿನಾಂಕ 3 ಮತ್ತು 4 ರಂದು ಎರಡು ದಿನಗಳ ಕಾಲ ನಗರಕ್ಕೆ 24×7 ಕುಡಿಯುವ ನೀರು ಸರಬರಾಜು ಇರುವುದಿಲ್ಲ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

## ಜಾತಿ, ಮತ, ಪಂಥ ಭೇದವಿಲ್ಲದೇ ಎಲ್ಲರ ಕಣ್ಣೀರು ಒರೆಸಿದವರು ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು



ನಗರದ ಪ್ರವಚನದಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠದ ವಿದ್ವಾಂಸ ಡಾ. ಗುರುರಾಜ ಗುಡಿ

ದಾವಣಗೆರೆ, ಜ. 2 - ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಸಾಮಾಜಿಕ ಕಳಕಳಿ, ದೇಶಭಕ್ತಿ ಮೇಳೈಸಿದ ಮೇರು ವ್ಯಕ್ತಿತ್ವ ವಾಗಿದ್ದರು ಎಂದು ಪೂರ್ಣಪ್ರಜ್ಞ ವಿದ್ಯಾಪೀಠದ ವಿದ್ವಾಂಸ ಡಾ. ಗುರುರಾಜ ಗುಡಿ ಬಣ್ಣಿಸಿದರು.

ಅಖಿಲ ಭಾರತ ಮಾಧ್ವ ಮಹಾಮಂಡಲ ದಾವಣಗೆರೆ ಶಾಖೆ, ಶ್ರೀ ಪೇಜಾವರ ಅಧೋಕ್ಷಜ ಮಠದ ಸಂಯುಕ್ತ ಆಶ್ರಯದಲ್ಲಿ ನಗರದ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುವಾರ ಆಯೋಜಿಸಿದ್ದ ಶ್ರೀ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಪಂಚಮ ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಜಾತಿ, ಮತ, ಪಂಥ ಭೇದವಿಲ್ಲದೇ ಎಲ್ಲರ ಕಣ್ಣೀರು ಒರೆಸಿದರು. ದೀನ-ದಲಿತರ ಸಂಕಷ್ಟಗಳಿಗೆ ಸ್ಪಂದಿಸಿದರು. ಶಾಲೆ, ಕಾಲೇಜು, ಹಾಸ್ಟೆಲ್ ಸ್ಥಾಪಿಸಿ ಶೈಕ್ಷಣಿಕ ಕೊಡುಗೆಯನ್ನೂ ನೀಡಿದರು ಎಂದು ವಿಶ್ಲೇಷಿಸಿದರು.

ಒಂಬತ್ತು ಸುದೀರ್ಘ ವರ್ಷಗಳ ಕಾಲ ಸನ್ಯಾಸ ಧರ್ಮವನ್ನು ನಿಷ್ಠೆಯಿಂದ ಪಾಲಿಸಿದರು. ದೇಶಕ್ಕೆ ಅಪಾಯ ಬಂದಾಗಲೆಲ್ಲ ಮಿಡಿದು ರಾಷ್ಟ್ರ ಭಕ್ತಿಯನ್ನು ಮೆರೆದರು. ಮತಾಂತರ ತಡೆಗೆ ಪ್ರಯತ್ನಿಸಿದರು ಎಂದು ಸಮಾಜಕ್ಕೆ ಗುರುಗಳು ಮಾಡಿದ ಸಹಾಯವನ್ನು ಸ್ಮರಿಸಿದರು.

ಹಿಂದೂ ಸಮಾಜದ ರಕ್ಷಣೆಗೆ ಪಣ ತೊಟ್ಟಿದ್ದ ಅವರು ವಿಶ್ವ ಹಿಂದೂ ಪರಿಷತ್‌ನ ಸಮ್ಮೇಳನ ಆಯೋಜನೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ರಾಜಕೀಯ ಕ್ಷೇತ್ರದ ನಾಯಕರೊಂದಿಗೆ ಒಳ್ಳೆಯ ಸಂಬಂಧ ಹೊಂದಿ, ಸಮಾಜಕ್ಕೆ ಉತ್ತಮ ಕೆಲಸ ಗಳಾಗಲು ಆ ಪ್ರಭಾವವನ್ನು ಬಳಸಿದರು ಎಂದರು.

### ಮೂರ್ತಿ ವಾಮನ, ಕಾರ್ಯ ತ್ರಿವಿಕ್ರಮ

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ನೋಡಲು ವಾಮನ ಮೂರ್ತಿಯಂತೆ ಕಂಡರೂ, ಅವರು ಬದುಕಿನಲ್ಲಿ ಸಾಧಿಸಿದ ಕಾರ್ಯಗಳಿಂದ ತ್ರಿವಿಕ್ರಮರೆನಿಸಿದರು ಎಂದು ಪಂಡಿತ ವೆಂಕಟಗಿರೀಶಾಚಾರ್ ಹೇಳಿದರು.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವುದಕ್ಕೆ ಅನ್ವರ್ಥವಾಗಿ ಶ್ರೀ ವಿಶ್ವೇಶತೀರ್ಥರು ಕೆಲಸ ಮಾಡಿದರು. ವಿವಿಧ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದರು. ಸಮಾಜದಲ್ಲಿ ದೊಡ್ಡ ಕ್ರಾಂತಿ ಮಾಡಿದರು. ಪೂರ್ಣಪ್ರಜ್ಞ ವಿದ್ಯಾಪೀಠವನ್ನು ಸ್ಥಾಪಿಸಿದ್ದು ಅವರು ಮಾಡಿದ ದೊಡ್ಡ ಕಾರ್ಯಗಳಲ್ಲಿ ಒಂದಾಗಿದೆ. ಸಣ್ಣ ಕಾರ್ಯಕ್ರಮದಿಂದ ಹಿಡಿದು ದೊಡ್ಡ ಸಮಾವೇಶಗಳ ವರೆಗೆ ಯಾರೇ ಕರೆದರೂ ಭಾಗವಹಿಸುತ್ತಿದ್ದರು ಎಂದು ತಿಳಿಸಿದರು.

ಭಗವಂತನು ಅನಂತ ಸಾಧನಗಳ ಮೂಲಕ ಜಗತ್ತನ್ನು ರಕ್ಷಣೆ ಮಾಡುತ್ತಾನೆ, ಆದ್ದರಿಂದ ನಾವು ಕ್ಷೇಮದಿಂದ ಇದ್ದೇವೆ. ದೇವರು ಹೇಗೆ ಕಾಪಾಡುತ್ತಾನೆ ಎಂಬುದನ್ನು ಊಹಿಸುವುದೂ ಅಸಾಧ್ಯ. ಭಕ್ತರ ರಕ್ಷಣೆ ಜವಾಬ್ದಾರಿ ದೇವರದು ಎಂದರು.

ಪೇಜಾವರ ಶ್ರೀಗಳು ಮಾಧ್ವ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಮಧ್ವ ಸಿದ್ಧಾಂತ ಗಟ್ಟಿಗೊಳಿಸಲು ಅವರ ಪಾತ್ರ ದೊಡ್ಡದು. ಅವರದು ವಿಶಿಷ್ಟ ವ್ಯಕ್ತಿತ್ವ. ಪಂಡಿತರನ್ನು ಪೋಷಣೆ ಮಾಡಿದರು. ಬಡ ವಿದ್ಯಾರ್ಥಿಗಳಿಗೆ ಸಹಾಯ ನೀಡಿದರು. ಹಾಸ್ಟೆಲ್, ಪಾಠಶಾಲೆ ಆರಂಭಿಸಿದರು. ಶಿಷ್ಯರ ಮೇಲೆ ಅವರಿಗೆ ಕರುಣೆ ಇತ್ತು. ಅವರ ನೆನಪಿನ ಶಕ್ತಿ ಅಗಾಧ.

**ಪಾಂಡುರಂಗಾಚಾರ್ ಮಣ್ಣೂರು,**
ಪಂಡಿತರು

ಶ್ರೀ ವಿಶ್ವೇಶತೀರ್ಥ ಗುರುಗಳು ಶಿಷ್ಯಂದಿರ ಬಗ್ಗೆ ತಂದೆ, ತಾಯಿಗಿಂತ ಹೆಚ್ಚು ಕಾಳಜಿ ತೋರಿದರು, ಪ್ರೀತಿಯನ್ನು ನೀಡಿದರು.

ಪಾಲಕರು ಮಕ್ಕಳಿಗೆ ಎಲ್ಲ ಸೌಲಭ್ಯ ನೀಡುತ್ತಾರೆ. ಆದರೆ ಧಾರ್ಮಿಕ ಸಂಸ್ಕಾರ ನೀಡುವಲ್ಲಿ ಹಿಂದೆ ಬಿದ್ದಿದ್ದಾರೆ. ಇದನ್ನು ಮನಗಂಡು ಗುರುಗಳು ಸಮಾಜದಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿದರು. ತ್ಯಾಗ, ವೈರಾಗ್ಯದ ಪ್ರತೀಕವಾಗಿದ್ದರು ಎಂದು ಹೇಳಿದರು.

ಕಂಪ್ಲಿ ಗುರುರಾಜಾಚಾರ್, ಜಯತೀರ್ಥಾಚಾರ ವಡೇರ ಮಾತನಾಡಿದರು.

ಹೋಟೆಲ್ ಉದ್ಯಮಿ ವಿಠ್ಠಲ ರಾವ್, ಅನಂತಯ್ಯ ಇದ್ದರು. ಸುಮೇಧಾ ಪ್ರಾರ್ಥಿಸಿದರು. ಇದಕ್ಕೂ ಮೊದಲು ಋಗ್ವೇದ ಸ್ವಾಹಾಕಾರ ಹೋಮದ ಪೂರ್ಣಾಹುತಿ ನೆರವೇರಿತು.

## ಇಂದು 'ಶಿಕ್ಷಣ ಅದಾಲತ್-ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ' ಅಭಿಯಾನ ಮುಂದುವರಿಕೆ



ಸ್ವಾಭಿಮಾನಿ ಬಳಗದ ಶಿಕ್ಷಣ ಅದಾಲತ್ - ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆಗೆ ಅಭಿಯಾನವು ಇಂದು ನ್ಯಾಮತಿ-ಹೊನ್ನಾಳಿ ತಾಲ್ಲೂಕುಗಳ ಹತ್ತು ಸರ್ಕಾರಿ ಶಾಲೆಗಳಲ್ಲಿ ಮುಂದುವರಿಯಲಿದೆ.

ಇಂದು ಬೆಳಿಗ್ಗೆ 9.30 ರಿಂದ ಸವಳಂಗದಿಂದ ಆರಂಭವಾಗಲಿದೆ. ಬಳಿಕ ಸೋಗಿಲು, ಫಲವನಹಳ್ಳಿ, ಕಂಚುಗಾರನಹಳ್ಳಿ, ಗಂಜೇನಹಳ್ಳಿ, ಚಟ್ನಹಳ್ಳಿ-2, ನ್ಯಾಮತಿ, ದೊಡ್ಡೆ ತ್ತಿನಹಳ್ಳಿ, ಕಂಕನಹಳ್ಳಿ ಹಾಗೂ ಕೊಡಚಗೊಂಡ ನಹಳ್ಳಿ ಗ್ರಾಮಗಳಲ್ಲಿನ ಸರ್ಕಾರಿ ಶಾಲೆಗಳಲ್ಲೂ ಅಭಿಯಾನ ನಡೆಯಲಿದೆ ಎಂದು ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಅವರು ತಿಳಿಸಿದ್ದಾರೆ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ಹೆಚ್ಚಿಸುವ ಕಲಿಕಾ ಕಾರ್ಯಾಗಾರ ಗಳನ್ನು ಇನ್‌ಸೈಟ್ಸ್ ಐ.ಎ.ಎಸ್. ಅಕಾಡೆಮಿ ಸಹಯೋಗದೊಂದಿಗೆ ಸ್ವಾಭಿಮಾನಿ ಬಳಗವು ಆಯೋಜಿಸಲಿದೆ ಎಂದು ಜಿ. ಬಿ. ವಿನಯ್ ಕುಮಾರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

## ನಗರದ ಬಾಪೂಜಿ ದೈಹಿಕ ಶಿಕ್ಷಣ ವಿದ್ಯಾಲಯದ ಸಾಧನೆ



ದಾವಣಗೆರೆ, ಜ. 2 - ತಮಿಳುನಾಡಿನ ಸೆಂಟ್ರಲ್ ಯೂನಿವರ್ಸಿಟಿಯಲ್ಲಿ ಈಚೆಗೆ ನಡೆದ ದಕ್ಷಿಣ ವಲಯ ಅಂತರ್ ವಿಶ್ವ ವಿದ್ಯಾಲಯ ಖೋ ಖೋ ಪಂದ್ಯಾವಳಿಯಲ್ಲಿ ನಗರದ ಬಾಪೂಜಿ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ರಾಜು, ಆಕಾಶ್, ಲಕ್ಷ್ಮಣ್, ನೇಸರ್, ಕ್ರೀಡಾಪಟುಗಳು ದಾವಣಗೆರೆ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ ದ್ವಿತೀಯ ಸ್ಥಾನ ಪಡೆದು ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯಕ್ಕೆ ಅರ್ಹತೆ ಪಡೆದಿದ್ದಾರೆ. ಹಾಗೂ ಲಕ್ಷ್ಮಣ್ ಬೆಸ್ಟ್ ಚೇಸರ್ ಪ್ರಶಸ್ತಿ ಪಡೆದಿದ್ದಾನೆ.

## ಕನಕ ಜಯಂತಿಗೆ ಸಿಎಂ ಹಂದರಗಂಬ ಪೂಜೆ, ಸ್ಥಳ ಪರಿಶೀಲನೆ



ದಾವಣಗೆರೆ, ಜ. 2- ಕುರುಬ ಸಮಾಜದ ವತಿಯಿಂದ ಜಿಲ್ಲಾ ಮಟ್ಟದ 537ನೇ ಶ್ರೀ ಕನಕದಾಸರ ಜಯಂತ್ಯೋತ್ಸವ ನಗರದ ಹೈಸ್ಕೂಲ್ ಮೈದಾನದಲ್ಲಿ ಇದೇ ದಿನಾಂಕ 5 ರಂದು ನಡೆಯಲಿರುವ ಕಾರ್ಯಕ್ರಮದ ಅಂಗವಾಗಿ ಹಂದರಗಂಬ ಪೂಜೆ ಹಾಗೂ ಸ್ಥಳ ಪರೀಶಿಲನೆಯನ್ನು ಗುರುವಾರ ಕುರುಬ ಸಮಾಜದ ಮುಖಂಡರು ಮಾಡಿದರು.

ಕನಕ ಜಯಂತ್ಯೋ ತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿ ದ್ದಾರೆ. ಸಾರ್ವಜನಿಕರಿಗೆ ಯಾವುದೇ ರೀತಿಯಾದ ತೊಂದರೆ ಯಾಗದಂತೆ ಸುಗಮವಾಗಿ ಕಾರ್ಯಕ್ರಮ ನಡೆಸಲು ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಗೋಣೆಪ್ಪ. ಹಾಲೇಕಲ್ಲು ಎಸ್ ಟಿ. ಅರವಿಂದ್, ಇಟ್ಟಿಗುಡಿ ಮಂಜುನಾಥ್, ಬಿ. ಲಿಂಗರಾಜ್, ಕೆ. ರೇವಣ್ಣ, . ಪ್ರಕಾಶ್. ಎಸ್.ಎಸ್. ಗೀರೀಶ್, ಚನ್ನಗಿರಿ ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ಡಿ. ಶಿವಣ್ಣ, ಕುರುಬರಕೇರಿ ಜಯಣ್ಣ. ಡಿ.ಜಿ.ಪ್ರಕಾಶ್, ಮಂಜುನಾಥ್ ಇಟ್ಟಿಗುಡಿ, ಶಿವಣ್ಣ ಮಾಸ್ಟರ್. ಆನಂದ್ ಇಟ್ಟಿಗುಡಿ, ವಿನಯ್ ಜೋಗಪ್ಪನವರ, ನವೀನ್ ಕುಮಾರ್ ಬಿ.ಎಚ್. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಹಿಳಾ ಸೇವಾ ಸಮಾಜದ ವಾರ್ಷಿಕೋತ್ಸವ



ದಾವಣಗೆರೆ, ಜ. 2- ಮಹಿಳಾ ಸಮಾಜದ ವಾರ್ಷಿಕೋತ್ಸವವು ಈಚೆಗೆ ನಡೆಯಿತು. ಶ್ರೀಮತಿ ಕೆ.ಕೆ. ಸುಶೀಲಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣಾಧಿಕಾರಿ ಜಿ.ಎಸ್. ರಾಜಶೇಖರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಎವಿಕೆ ಕಾಲೇಜಿನ ಉಪನ್ಯಾಸಕ ಡಾ. ರಣಧೀರ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀಮತಿ ನೀಲಗುಂದ ಜಯಮ್ಮ, ಉಪಾಧ್ಯಕ್ಷರಾದ ಶ್ರೀಮತಿ ಶಾರದಮ್ಮ ಮತ್ತು ಇತರರು ಉಪಸ್ಥಿತರಿದ್ದರು.

### ನಗರದಲ್ಲಿ ಇಂದು ಯುವ ಜನೋತ್ಸವ ಜಾಗೃತಿ ಜಾಥಾ

ಎಂಬಿಎ ಮೈದಾನದಲ್ಲಿ ಇದೇ ಜನವರಿ 5 ಮತ್ತು 6 ರಂದು ನಡೆಯಲಿರುವ ರಾಜ್ಯ ಮಟ್ಟದ ಯುವಜನೋತ್ಸವದ ಅಂಗವಾಗಿ ಇಂದು ಬೆಳಗ್ಗೆ 7.30 ರಿಂದ ಗುಂಡಿ ವೃತ್ತದಿಂದ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಂದ ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

## 440 ಜಿಲ್ಲೆಗಳ ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣ ಹೆಚ್ಚಳ



ನವದೆಹಲಿ, ಜ. 2- ದೇಶಾದ್ಯಂತದ 440 ಜಿಲ್ಲೆಗಳಲ್ಲಿ ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣ ಹೆಚ್ಚಿನ ಮಟ್ಟದಲ್ಲಿರುವುದು ಕಂಡು ಬಂದಿದೆ. ಈ ಜಿಲ್ಲೆಗಳಲ್ಲಿ ಸಂಗ್ರಹಿಸಲಾದ ಮಾದರಿಗಳ ಪೈಕಿ ಶೇ. 20ರಷ್ಟರಲ್ಲಿ ನೈಟ್ರೇಟ್ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿದೆ ಎಂದು ಕೇಂದ್ರ ಅಂತರ್ಜಲ ಮಂಡಳಿ ವರದಿಯಲ್ಲಿ ತಿಳಿಸಲಾಗಿದೆ.

ನೈಟ್ರೇಟ್ ಸಾಂಧ್ರತೆ ಹೆಚ್ಚಾಗುವುದು ಪರಿಸರ ಹಾಗೂ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಅದರಲ್ಲೂ ನೈಟ್ರೋಜನ್ ಆಧರಿತ ರಸಗೊಬ್ಬರ ಹಾಗೂ ಪ್ರಾಣಿ ತ್ಯಾಜ್ಯಗಳನ್ನು ಬಳಸುವ ಕೃಷಿ ವಲಯಗಳ ಮೇಲೆ ಇದರ ಪರಿಣಾಮ ಹೆಚ್ಚಾಗಿರುತ್ತದೆ.

2024ರ ಅಂತರ್ಜಲ ಗುಣಮಟ್ಟ ವರದಿಯ ಪ್ರಕಾರ, ಶೇ. 9.04ರಷ್ಟು ಮಾದರಿಗಳಲ್ಲಿ ಫ್ಲೋರೈಡ್ ಪ್ರಮಾಣ ಸುರಕ್ಷತಾ ಮಟ್ಟಕ್ಕಿಂತ ಹೆಚ್ಚಾಗಿರುವುದು ಕಂಡು ಬಂದಿದೆ. ಶೇ. 3.55ರಷ್ಟು ಮಾದರಿಗಳಲ್ಲಿ ಆರ್ಸೆನಿಕ್ ಮಾಲಿನ್ಯ ಕಂಡು ಬಂದಿದೆ.

ಮೇ 2023ರಲ್ಲಿ ದೇಶಾದ್ಯಂತ 15,259 ಮಾಪನ ಕೇಂದ್ರಗಳಲ್ಲಿ ನೀರಿನ ಮಾದರಿ ಪಡೆಯಲಾಗಿತ್ತು. ಇವುಗಳಲ್ಲಿ ಶೇ. 25ರಷ್ಟು ಮಾದರಿಗಳನ್ನು ವಿವರವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮುಂಗಾರಿಗೆ ಮುಂಚೆ ಹಾಗೂ ನಂತರದಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಲು 4,962 ಕೇಂದ್ರಗಳನ್ನು ಆಯ್ಕೆ ಮಾಡಲಾಗಿತ್ತು.

ಈ ಪೈಕಿ ಶೇ. 20ರಷ್ಟು ಮಾದರಿಗಳಲ್ಲಿ ನೈಟ್ರೇಟ್ ಪ್ರಮಾಣ ನಿಗದಿತ ಮಿತಿಯಾದ ಲೀಟರ್‌ಗೆ 45 ಮಿಲಿ ಗ್ರಾಂಗಳಿಗಿಂತ ಹೆಚ್ಚಾಗಿದೆ. ಇದು ವಿಶ್ವ ಆರೋಗ್ಯ ಸಂಘಟನೆ ಹಾಗೂ ಭಾರತೀಯ ಮಾನದಂಡಗಳ ಬ್ಯೂರೋದ ಕುಡಿಯುವ ನೀರಿನ ಮಿತಿಗಿಂತ ಹೆಚ್ಚಾಗಿದೆ.

ರಾಜಸ್ಥಾನ, ಕರ್ನಾಟಕ ಹಾಗೂ ತಮಿಳುನಾಡಿನ ಶೇ. 40ರಷ್ಟು ಮಾದರಿಗಳಲ್ಲಿ ಹೆಚ್ಚಿನ ಮಾಲಿನ್ಯ ಕಂಡು ಬಂದಿದೆ. ಮಹಾರಾಷ್ಟ್ರದಲ್ಲಿ ಶೇ. 35.74, ತೆಲಂಗಾಣದಲ್ಲಿ ಶೇ. 27.48 ಆಂಧ್ರಪ್ರದೇಶದಲ್ಲಿ ಶೇ. 23.5 ಹಾಗೂ ಮಧ್ಯ ಪ್ರದೇಶದಲ್ಲಿ ಶೇ. 22.58ರಷ್ಟು ಮಾದರಿಗಳಲ್ಲಿ ಮಾಲಿನ್ಯ ಕಂಡು ಬಂದಿದೆ.

ಉತ್ತರ ಪ್ರದೇಶ, ಕೇರಳ, ಜಾರ್ಖಂಡ್ ಹಾಗೂ ಬಿಹಾರಗಳಲ್ಲಿ ಕಡಿಮೆ ಮಾಲಿನ್ಯ ಇದೆ.

ಅರುಣಾಚಲ ಪ್ರದೇಶ, ಅಸ್ಸಾಂ, ಗೋವಾ, ಮೇಘಾಲಯ, ಮಿಜೋರಾಂ ಹಾಗೂ ನಾಗಾಲ್ಯಾಂಡ್‌ಗಳ ಎಲ್ಲಾ ಮಾದರಿಗಳು ಸುರಕ್ಷಿತ ಮಿತಿಯಲ್ಲಿವೆ.

ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಗುಜರಾತ್ ರಾಜ್ಯಗಳಲ್ಲಿ ನೈಟ್ರೇಟ್ ಪ್ರಮಾಣ 2015ರಿಂದಲೂ ಸ್ಥಿರವಾಗಿದೆ. ಆದರೆ ಉತ್ತರಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ, ಹರಿಯಾಣಗಳಲ್ಲಿ 2017-23ರ ನಡುವೆ ಮಾಲಿನ್ಯ ಹೆಚ್ಚಾಗಿರುವುದು ಕಂಡು ಬಂದಿದೆ ಎಂದು ವರದಿ ತಿಳಿಸಿದೆ.

ನೀರಾವರಿಗೆ ಅತಿಯಾಗಿ ಅಂತರ್ಜಲ ಬಳಸುವುದರಿಂದ ರಸಗೊಬ್ಬರದಲ್ಲಿನ ನೈಟ್ರೇಟ್ ಮಿಶ್ರಣವಾಗಿ ಮಣ್ಣಿನಲ್ಲಿ ಸೇರಿಕೊಳ್ಳುತ್ತಿದೆ. ಇದು ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣ ಹೆಚ್ಚಾಗಲು ಕಾರಣವಾಗಿದೆ ಎಂದು ವರದಿ ತಿಳಿಸಿದೆ.

ಹೈನುಗಾರಿಕೆ ವಲಯದಲ್ಲಿ ಪ್ರಾಣಿ ತ್ಯಾಜ್ಯಗಳನ್ನು ಸರಿಯಾಗಿ ವಿಲೇವಾರಿ ಮಾಡದಿದ್ದಾಗಲೂ ಮಣ್ಣಿನಲ್ಲಿ ನೈಟ್ರೈಟ್ ಸೇರಿಕೊಂಡು ಕಲುಷಿತವಾಗುತ್ತಿದೆ.

ನಗರೀಕರಣ ಹಾಗೂ ಜನಸಂಖ್ಯಾ ಹೆಚ್ಚಳದ ಕಾರಣದಿಂದಾಗಿ ತ್ಯಾಜ್ಯ ನೀರು ಹಾಗೂ ಕೊಳಚೆ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಇದೂ ಸಹ ನೈಟ್ರೇಟ್ ಪ್ರಮಾಣ ಹೆಚ್ಚಲು ಕಾರಣವಾಗುತ್ತಿದೆ. ತ್ಯಾಜ್ಯ ನೀರಿನ ಸಂಸ್ಕರಣೆಯ ಕೊರತೆಯಿಂದ ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ವರದಿ ತಿಳಿಸಿದೆ.

ಕರ್ನಾಟಕ, ರಾಜಸ್ಥಾನ, ಹರಿಯಾಣ, ಆಂಧ್ರಪ್ರದೇಶ ಹಾಗೂ ತೆಲಂಗಾಣಗಳಲ್ಲಿ ಫ್ಲೋರೈಡ್ ಸಾಂಧ್ರತೆ ಅನುಮತಿ ಮಿತಿಗಿಂತ ಹೆಚ್ಚಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ದೀರ್ಘಕಾಲ ಫ್ಲೋರೈಡ್ ಹಾಗೂ ಆರ್ಸೆನಿಕ್ ಮಿಶ್ರಿತವಾಗಿರುವ ನೀರನ್ನು ಬಳಸುವುದರಿಂದ ಆರೋಗ್ಯದ ಮೇಲೆ ತೀವ್ರ ಪರಿಣಾಮ ಆಗುತ್ತಿದೆ. ಹಲವು ವಲಯಗಳಲ್ಲಿ ನೀರಿನಲ್ಲಿ ಯುರೇನಿಯಂ ಪ್ರಮಾಣ ಹೆಚ್ಚಾಗಿರುವುದು ಮತ್ತೊಂದು ಕಳವಳಕ್ಕೆ ಕಾರಣವಾಗಿದೆ.

ಬೇಕಾಗಿದ್ದಾರೆ
WANTED
CASHIER
MALE ONLY
Salary + ESI, PF
Get proper resume along with a photo attested & a xerox of your Adhaar Card.
ಆಶೂಜಿ ಡಿಸ್ಟ್ರಿಬ್ಯೂಟರ್ಸ್
# 323 / 1D, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ

